# ಹಂಪಿ ಟೈಮ್ಸ್
HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 • ಸಂಚಿಕೆ: 202 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 13.02.2025 • ಗುರುವಾರ • ಪುಟ:04 • ಬೆಲೆ:2
Volume:02 • Issue: 202 • PRGI No:KARKAN/2023/88055 • VIJAYANAGARA • 13.02.2025 • Thursday • Page:04 • Rs:2





ಓದುಗರ ಬೆರಳ ತುದಿಗೆ ನಿಮ್ಮ ಬ್ರಾಂಡ್, ನಿಮ್ಮ ವ್ಯವಹಾರ, ಸೇವೆ/ವಿಶೇಷ ಕೊಡುಗೆಗಳನ್ನು ಹಂಪಿ ಟೈಮ್ಸ್ ಮೂಲಕ ಹೆಚ್ಚು ಓದುಗರಿಗೆ ತಲುಪಿಸಿ.

1,10,000+
Digital E-PAPER READERS

No.1 HAMPI TIMES LEADING VIJAYANAGARA District News Paper

Contact for Advertisements: 9448633038


## ದೇವಾಲಯ ದರ್ಶನ



ಹಂಪಿ ಶ್ರೀ ವಿರೂಪಾಕ್ಷೇಶ್ವರ ದರ್ಶನ

ನಿತ್ಯ ಅಭಿಷೇಕ ಸಮಯ
ಬೆಳಿಗ್ಗೆ: 6:30, 10:30 ಸಂಜೆ 6:30ಕ್ಕೆ

-: ದರ್ಶನ ಸಮಯ :-
ಬೆಳಿಗ್ಗೆ 6.30 ರಿಂದ ಮಧ್ಯಾಹ್ನ 1.15ರವರೆಗೆ
ಮಧ್ಯಾಹ್ನ 3 ರಿಂದ ರಾತ್ರಿ 7.30ರವರೆಗೆ

## ಆನಂದ ಬಾಣ





ಹಂಪಿ ಟೈಮ್ಸ್ SSLC ಮಾರ್ಗದರ್ಶಿ
ಪ್ರಿಂಟ್ & ಇ-ಪೇಪರ್‌ನಲ್ಲೂ ಲಭ್ಯ
ಕೆಳಗಿನ ವೆಬ್‌ಸೈಟ್‌ಗೆ ಭೇಟಿ ನೀಡಿ..
www.hampitimes.com
epaper.hampitimes.com


ಫೆಬ್ರವರಿ 28 ರಿಂದ ಹಂಪಿ ಉತ್ಸವ | ಪ್ರಧಾನ ವೇದಿಕೆ ನಿರ್ಮಾಣ ಕಾಮಗಾರಿ ಆರಂಭ | ಡಿಸಿ ಎಂ.ಎಸ್.ದಿವಾಕರ್ ಹೇಳಿಕೆ

# ಪ್ರಧಾನ ವೇದಿಕೆ ಪ್ರಕಾಶಮಯ

## ಪ್ರಧಾನ ವೇದಿಕೆಗೆ ನಾಡಿನ ಸಜ್ಜನ ರಾಜಕಾರಣಿ ಹಂಪಿ ಉತ್ಸವದ ರೂವಾರಿ ಎಂ.ಪಿ.ಪ್ರಕಾಶ್ ಹೆಸರು ಅಂತಿಮ

## ಐದು ಎಕರೆ ಪ್ರದೇಶದಲ್ಲಿ 120x80 ಅಡಿ ಪ್ರಧಾನ ವೇದಿಕೆ | 100 ಎಕರೆ ಜಾಗದಲ್ಲಿ ವಾಹನಗಳ ಪಾರ್ಕಿಂಗ್

## 4 ಲಕ್ಷ ಜನ ಪಾಲ್ಗೊಳ್ಳುವ ನಿರೀಕ್ಷೆ | ಧ್ವನಿ ಮತ್ತು ಬೆಳಕು ಫಿಕ್ಸ್ | 70 ಸಾವಿರ ಆಸನ ವ್ಯವಸ್ಥೆ | ಹಂಪಿ ಬೈ ಸ್ಕೈ

■ **ಹಂಪಿ ಟೈಮ್ಸ್ ಹೊಸಪೇಟೆ**

ವಿಜಯನಗರ ಸಾಮ್ರಾಜ್ಯದ ಗತವೈಭವ ಸಾರುವ ಹಾಗೂ ಪ್ರವಾಸೋದ್ಯಮ ಅಭಿವೃದ್ಧಿ ನಿಟ್ಟಿನಲ್ಲಿ ಹಂಪಿ ಉತ್ಸವ -2025 ಆಯೋಜನೆಗೆ ಸರ್ಕಾರ ಸಮ್ಮತಿ ನೀಡಿದೆ. ಫೆಬ್ರವರಿ 28 , ಮಾರ್ಚ್ 1 ಮತ್ತು 2 ಸೇರಿ ಮೂರು ದಿನಗಳ ಉತ್ಸವಕ್ಕೆ ಈಗಾಗಲೇ ವಿಜಯನಗರ ಜಿಲ್ಲಾಡಳಿತ ವತಿಯಿಂದ ಸಕಲ ಸಿದ್ಧತೆಯನ್ನು ಆರಂಭಿಸಲಾಗಿದೆ ಎಂದು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ಹೇಳಿದರು. ಗಾಯಿತ್ರಿ ಪೀಠದ ಬಳಿಯ 5 ಎಕರೆ ವಿಶಾಲ ಪ್ರದೇಶದಲ್ಲಿ 120*80 ಅಡಿ ವಿಸ್ತೀರ್ಣದಲ್ಲಿ ಹಂಪಿಯ ಸ್ಮಾರಕವನ್ನು ಪ್ರತಿಬಿಂಬಿಸುವ ಪ್ರಧಾನ ವೇದಿಕೆ ನಿರ್ಮಾಣ ಮಾಡಲಾಗುತ್ತಿದೆ. ನಾಡಿನ ಸಜ್ಜನ ರಾಜಕಾರಣಿ, ಮಾಜಿ ಉಪ ಮುಖ್ಯಮಂತ್ರಿ, ಹಂಪಿ ಉತ್ಸವದ ರೂವಾರಿ ಎಂ.ಪಿ.ಪ್ರಕಾಶ್ ಹೆಸರನ್ನು ಪ್ರಧಾನ ವೇದಿಕೆಗೆ ಇಡಲು ತೀರ್ಮಾನಿಸಲಾಗಿದೆ

ಬುಧವಾರ ಹಂಪಿಯ ಗಾಯಿತ್ರಿ ಪೀಠದ ಬಳಿಯ ಮೈದಾನದಲ್ಲಿ ಹಂಪಿ ಉತ್ಸವ -2025ದ ಸಿದ್ಧತೆಗಳನ್ನು ವೀಕ್ಷಿಸಿ ನಂತರ ಸುದ್ದಿಗಾರರೊಂದಿಗೆ ಮಾತನಾಡಿದರು.

ಪ್ರತಿ ವರ್ಷದಂತೆ ಈ ಬಾರಿಯೂ 4 ಪ್ರಮುಖ ಸ್ಥಳಗಳಲ್ಲಿ ವೇದಿಕೆಗಳನ್ನು ನಿರ್ಮಿಸಲಾಗುವುದು. 1 ಕಡೆ ಧ್ವನಿ ಬೆಳಕು ಪ್ರದರ್ಶನ ನಡೆಯಲಿದೆ. ಗಾಯಿತ್ರಿ ಪೀಠದ ಬಳಿ ಇರುವ ಸುಮಾರು ಐದು ಎಕರೆ ಮೈದಾನದಲ್ಲಿ





120*80 ಅಡಿ ಪ್ರಧಾನ ವೇದಿಕೆ ನಿರ್ಮಿಸಲಾಗುವುದು. ಸಾರ್ವಜನಿಕರಿಗೆ ಸುಮಾರು 70 ಸಾವಿರ ಆಸನಗಳ ವ್ಯವಸ್ಥೆ ಮಾಡಲಾಗುವುದು. ಇದರೊಂದಿಗೆ ಎದುರು ಬಸವಣ್ಣ ಮಂಟಪದ ಆವರಣ, ವಿರೂಪಾಕ್ಷ ದೇವಸ್ಥಾನ, ಸಾಸಿವೆ ಕಾಳು ಗಣಪ ಮಂಟಪದ ಬಳಿ ಸಮಾನಂತರ ವೇದಿಕೆಗಳನ್ನು ನಿರ್ಮಿಸಲಾಗುವುದು. ಈ ವೇದಿಕೆಗಳಲ್ಲಿ ನಾಡಿನ ಹೆಸರಾಂತ ಕಲಾವಿದರು ಶಾಸ್ತ್ರೀಯ ಹಾಗೂ ಜಾನಪದ ಕಲೆಗಳನ್ನು ಅನಾವರಣಗೊಳಿಸಲಿದ್ದಾರೆ. ವಿರೂಪಾಕ್ಷ ದೇವಸ್ಥಾನ ವೇದಿಕೆಯಲ್ಲಿ ಮಹಿಳಾ ಗೋಷ್ಠಿ, ಕವಿಗೋಷ್ಠಿ, ಹಂಪಿ ಇತಿಹಾಸ ಸಾರುವ ಗೋಷ್ಠಿಗಳನ್ನು ಆಯೋಜಿಸಲಾಗುವುದು. ಕಳೆದ ಮೂರು ಬಾರಿ ಹಂಪಿ ಉತ್ಸವದಲ್ಲಿ ಭಾಗವಹಿಸಿ ಪ್ರದರ್ಶನ ನೀಡದೆ ಇರುವ ಕಲಾವಿದರು ಹಾಗೂ ಸ್ಥಳೀಯ ಕಲಾವಿದರಿಗೆ ಈ ಬಾರಿಯ ಉತ್ಸವದಲ್ಲಿ ಆದ್ಯತೆ ನೀಡಲಾಗುವುದು. ಆನೆಲಾಯದ ಬಳಿ ಧ್ವನಿ ಬೆಳಕು ಪ್ರದರ್ಶನಕ್ಕೆ ಭಾರತೀಯ ಪುರತತ್ವ ಇಲಾಖೆ ಅನುಮತಿ ನೀಡಿದೆ. ಉತ್ಸವ ಆರಂಭಕ್ಕೂ 3 ದಿನ ಮುನ್ನ ಹಾಗೂ ನಂತರ 7 ದಿನಗಳ ಕಾಲ ಧ್ವನಿ ಬೆಳಕು ಕಾರ್ಯಕ್ರಮ ನಡೆಯಲಿದೆ ಎಂದು ಹೇಳಿದರು.

**ವೈವಿಧ್ಯಮಯ ಕಾರ್ಯಕ್ರಮಗಳ ಆಯೋಜನೆ**

ಹಂಪಿ ಉತ್ಸವದ ಅಂಗವಾಗಿ ವೈವಿಧ್ಯಮಯ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತದೆ. ಉತ್ಸವ ಆರಂಭದ ಎರಡು ದಿನ ಮುನ್ನ ತುಂಗಭದ್ರಾ ನದಿ ತಟದಲ್ಲಿ ತುಂಗಾರತಿ ಮಾಡಲಾಗುವುದು. ಒಂದು ದಿನ ಮುನ್ನ ಹೊಸಪೇಟೆ ನಗರದಲ್ಲಿ ವಸಂತ ವೈಭವ ಮೆರವಣಿಗೆ ನಡೆಯಲಿದೆ. ಉತ್ಸವದ ಮೊದಲ ದಿನ ಉದ್ದಾನ ವೀರಭದ್ರ ಮಂದಿರದಿಂದ ವಿರೂಪಾಕ್ಷ ಮಂದಿರದವರೆಗೆ ಜನಪದ ಮೆರವಣಿಗೆ ನಡೆಯಲಿದೆ. ಹಂಪಿ ಬೈ ಸ್ಕೈ ವಿಶೇಷವಾಗಿದ್ದು, ಹೆಲಿಕಾಪ್ಟರ್ ಏರಿ ಆಗಸದಿಂದ ಹಂಪಿ ವೈಭವವನ್ನು >>4

---

10ನೇ ತರಗತಿ ಶೈಕ್ಷಣಿಕ ಜೀವನದಲ್ಲಿ ನಿರ್ಣಾಯಕ ಹಂತ. ಈ ಹಂತದಲ್ಲಿ ಪೋಷಕರು ಮಕ್ಕಳ ವಿದ್ಯಾಭ್ಯಾಸದತ್ತ ಗಮನಹರಿಸಬೇಕು ಮತ್ತು ಅವರಿಗೆ ಸಮರ್ಪಕವಾಗಿ ಮಾರ್ಗದರ್ಶನ ಮಾಡಬೇಕು. ಹಂಪಿ ಟೈಮ್ಸ್ ಬಳಗದಿಂದ ಪಾಲಕರಿಗೆ ಕೆಲ ಅತ್ಯುತ್ತಮ ಸಲಹೆಗಳು

# ಮಕ್ಕಳ ಉಜ್ವಲ ಭವಿಷ್ಯಕ್ಕೆ ಪಾಲಕರ ಪಾತ್ರ

## ಈ ಬಾರಿಯ ಫಲಿತಾಂಶ ನಮ್ಮದೆ | ಶಿಕ್ಷಕರ ಪರಿಶ್ರಮಕ್ಕೆ ಪಾಲಕರು ಕೈಜೋಡಿಸಿದ್ರೆ ವಿದ್ಯಾರ್ಥಿಗಳು ಪಾಸ್

**1. ಮಕ್ಕಳಿಗೆ ಪ್ರೋತ್ಸಾಹ ನೀಡಿ, ಅವರ ಪ್ರಯತ್ನ ಶ್ಲಾಘಿಸಿ**
ಮಕ್ಕಳ ಪ್ರಗತಿಯಲ್ಲಿ ಆಸಕ್ತಿ ತೋರಿಸಿ, ಅವರ ಪ್ರಯತ್ನವನ್ನು ಶ್ಲಾಘಿಸಿ. ಒತ್ತಡವಿಲ್ಲದ ಪರಿಸರವನ್ನು ಸೃಷ್ಟಿಸಿ, ಶಿಸ್ತು ಕಾಪಾಡಲು ಪ್ರೇರೇಪಿಸಿ.

**2. ಅಧ್ಯಯನ ವೇಳಾಪಟ್ಟಿ ರೂಪಿಸಲು ಸಹಕರಿಸಿ**
ಮಕ್ಕಳಿಗೆ ಸಮಯದ ಮಾರ್ಗಸೂಚಿ ಕೊಟ್ಟು, ದಿನದ ಪಾಠ, ಪುನರಾವಲೋಕನ (Revision), ವಿಶ್ರಾಂತಿ ಮತ್ತು ವಿಹಾರಕ್ಕೆ ಸಮಾನ ಪ್ರಮಾಣದ ಸಮಯವನ್ನು ಪ್ಲಾನ್ ಮಾಡಿ.

**3. ಪಠ್ಯಾತೀತ ಚಟುವಟಿಕೆಗಳನ್ನು ನಿಯಂತ್ರಿಸಿ**
ಮೊಬೈಲ್ ಫೋನ್, ಟಿವಿ, ಅಥವಾ ಗೇಮಿಂಗ್ ನಲ್ಲಿ ಸಮಯ ವ್ಯಯವನ್ನು ಕಟ್ಟಿ ಹಾಕಿ. ಅಂತರ್ಜಾಲವನ್ನು ಶೈಕ್ಷಣಿಕ ಉದ್ದೇಶಗಳಿಗಾಗಿ ಮಾತ್ರ ಬಳಸಲು ಪ್ರೋತ್ಸಾಹಿಸಿ.

**4. ಮಕ್ಕಳೊಂದಿಗೆ ಮಾತುಕತೆ ಮುಕ್ತವಾಗಿರಲಿ**
ಮಕ್ಕಳ ಭಾವನೆಗಳು, ಆತಂಕಗಳು, ಅಥವಾ ಸಮಸ್ಯೆಗಳನ್ನು ತಿಳಿಯಲು ಸಮಯ ಕಳೆಯಿರಿ. ಏಕಪಕ್ಷೀಯ ಸಲಹೆ ಕೊಡುವ ಬದಲಿಗೆ, ಮಕ್ಕಳ ಅಭಿಪ್ರಾಯವನ್ನೂ ಕೇಳಿ.

**5. ಪಠ್ಯಪೂರ್ವಕ ಪ್ರಗತಿಗೆ ಪ್ರಾಮುಖ್ಯತೆ ನೀಡಿ**
ಮಕ್ಕಳ ಪಾಠಗಳು, ಗೃಹಪಾಠಗಳು, ಮತ್ತು ಪರೀಕ್ಷಾ ತಯಾರಿ ಹಂತವನ್ನು ಪರಿಶೀಲಿಸಿ. ಶಾಲಾ ಶಿಕ್ಷಕರ ಜೊತೆ ನಿಯಮಿತವಾಗಿ ಸಂಪರ್ಕಿಸಿ ಮಕ್ಕಳ ಶೈಕ್ಷಣಿಕ ಮತ್ತು ವ್ಯಕ್ತಿತ್ವದ ಅಭಿವೃದ್ಧಿ ಕುರಿತು ಮಾಹಿತಿ ಪಡೆಯಿರಿ.

**6. ಶಿಸ್ತು ಮತ್ತು ಸ್ವಾತಂತ್ರ್ಯಕ್ಕೆ ಸಮತೋಲನ ಕಾಯ್ದುಕೊಳ್ಳಿ**
ಅಗತ್ಯವಿದ್ದಾಗ ಮಕ್ಕಳಿಗೆ ಸಹಾಯ ಮಾಡಿರಿ, ಸ್ವತಂತ್ರವಾಗಿ ಅಭ್ಯಾಸ ಮಾಡುವ ಅವಕಾಶ ನೀಡಿ. ನಿರಂತರವಾಗಿ ಒತ್ತಡ ಹಾಕುವುದರಿಂದ ಮಕ್ಕಳು ಉತ್ತಮ ಶ್ರೇಣಿಯಿಂದ ವಂಚಿತಗೊಳ್ಳಬಹುದು, ಹಾಗಾಗಿ ಸಮತೋಲನವನ್ನು ಕಾಪಾಡಿ.

**7. ಆರೋಗ್ಯದತ್ತ ಗಮನ ಹರಿಸಿ**
ನಿತ್ಯ ಸರಿಯಾದ ಆಹಾರ, ನಿದ್ರೆ, ಮತ್ತು ವಿಶ್ರಾಂತಿ ಅವರ ಕಲಿಕೆ ಪ್ರಭಾವಕ್ಕೆ ಬಹಳ ಮುಖ್ಯ. ಒತ್ತಡ ನಿವಾರಣೆಗೆ ಮಕ್ಕಳಿಗೆ ಹಗುರವಾದ ಚಟುವಟಿಕೆಗಳಲ್ಲಿ ಭಾಗವಹಿಸಲು ಅವಕಾಶ ಕೊಡಿ.

**8. ತೀರ್ಮಾನಗಳಲ್ಲಿ ಸಹಾಯ ಮಾಡಿ**
ಮುಂದಿನ ವಿದ್ಯಾಭ್ಯಾಸದ ಗುರಿಗಳನ್ನು ಪರಿಚಯಿಸಿ. ಬೋರ್ಡ್ ಪರೀಕ್ಷೆಯ ನಂತರ ಯಾವ ಕೋರ್ಸ್ ಅಥವಾ ಸ್ಟ್ರೀಮ್ ಆಯ್ಕೆ ಮಾಡಬೇಕು ಎಂಬ ವಿಷಯದಲ್ಲಿ ಚರ್ಚಿಸಿ. ಮಕ್ಕಳ ಸ್ವಭಾವ ಮತ್ತು ಆಸಕ್ತಿಯ ಆಧಾರದ ಮೇಲೆ ಮಾರ್ಗದರ್ಶನ ನೀಡಿರಿ.

**9. ಪ್ರೇರಣಾದಾಯಕ ಉದಾಹರಣೆ ನೀಡಿರಿ**
ಯಶಸ್ವಿಯಾದ ವ್ಯಕ್ತಿಗಳ ಕಥೆಗಳು, ನಿಮ್ಮದೇ ಕೆಲಸದ ಅನುಭವ ಅಥವಾ ಜೀವನ ಪಾಠಗಳನ್ನು ಹಂಚಿಕೊಂಡು ಮಕ್ಕಳನ್ನು ಪ್ರೇರೇಪಿಸಿ. ಜೀವನದಲ್ಲಿ ಶ್ರಮದ ಮಹತ್ವವನ್ನು ಮನವರಿಕೆ ಮಾಡಿಸಿ.

**10. ಅಹಿತಕರ ಒತ್ತಡ ಹೊರಿಸದಿರಿ**
ತೇರ್ಗಡೆಯ ತೀರ್ಮಾನವನ್ನು ಕಠಿಣವಾಗಿ ನಿರ್ಧರಿಸದೆ, ಅವರ ಶ್ರಮದ ಮೇಲೆ ಗಮನಹರಿಸಿ. "ನೀವು ಪ್ರಯತ್ನಿಸಿ ಯಶಸ್ವಿಯಾಗುತ್ತೀರಿ" ಎಂಬ ಆತ್ಮಸ್ಥೈರ್ಯ ತುಂಬುವ ಮಾತುಗಳು ಹೆಚ್ಚು ಪ್ರೇರಣೆ ನೀಡುತ್ತವೆ.

www.hampitimes.com/epaper.hampitimes.com


ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಕನ್ನಡ ದಿನಪತ್ರಿಕೆ
SSLC ವಿದ್ಯಾರ್ಥಿಗಳಿಗಾಗಿ
ಹೈಸ್ಕೋರ್ ಮತ್ತು ಸರಳ ಅಭ್ಯಾಸಕ್ಕೆ ತಜ್ಞ ಶಿಕ್ಷಕರಿಂದ ಸುಲಭ ಅಂಶಗಳು ನಿಮ್ಮ ಹಂಪಿ ಟೈಮ್ಸ್ ದಿನಪತ್ರಿಕೆಯಲ್ಲಿ
scan to read epaper
9 ಜುಲೈ 2024 ರಿಂದ ಪ್ರತಿದಿನ
ನಿಮ್ಮ ಮೊಬೈಲ್‌ನಲ್ಲಿ ಸ್ಕ್ಯಾನ್ ಮಾಡಿ ಇನ್ಸ್ಟಾಲ್ ಮಾಡಿಕೊಳ್ಳಿ!



ಸುದ್ದಿ, ಇವೆಂಟ್ಸ್ ಕವರೇಜ್, ಜಾಹೀರಾತಿಗಾಗಿ ಸಂಪರ್ಕಿಸಿ: ಮೊ:9448633038, ಇಮೇಲ್: hampitimes@gmail.com


ಮಕ್ಕಳ ಶಿಕ್ಷಣದಲ್ಲಿ ಪೋಷಕರ ಪಾತ್ರವು ಅತ್ಯಂತ ಮಹತ್ವದಾಗಿದೆ. ಪೋಷಕರು ಮಕ್ಕಳ ಆತ್ಮವಿಶ್ವಾಸವನ್ನು ಹೆಚ್ಚಿಸಿ, ಅವರಿಗೆ ಪ್ರೋತ್ಸಾಹ ಮತ್ತು ಪ್ರೀತಿ ತುಂಬಿದ ಪರಿಪೂರ್ಣ ಸಹಾಯವನ್ನು ನೀಡಿದರೆ, ಮಕ್ಕಳು ನಿಜಕ್ಕೂ ಉತ್ತಮವಾಗಿ ಹೊರಹೊಮ್ಮುತ್ತಾರೆ.

ಹಂಪಿ ಟೈಮ್ಸ್ HAMPI TIMES

# ಜೀತ ಪದ್ಧತಿ ನಿರ್ಮೂಲನೆಗೆ ಎಲ್ಲರೂ ಕೈಜೋಡಿಸಿ ನ್ಯಾಯಾಧೀಶೆ ಕೆ.ಜಿ.ಶಾಂತಿ ಕರೆ

■ **ಹಂಪಿ ಟೈಮ್ಸ್ ಬಳ್ಳಾರಿ**

ಸಮಾಜದಲ್ಲಿ ಜೀತ ಪದ್ಧತಿ, ಮಾನವ ಕಳ್ಳ ಸಾಗಾಣಿಕೆ ಶಿಕ್ಷಾರ್ಹ ಅಪರಾಧವಾಗಿದ್ದು, ಇವುಗಳನ್ನು ಬುಡ ಸಮೇತ ಕಿತ್ತೊಗೆಯಲು ಇಲಾಖೆಗಳೊಂದಿಗೆ ಎಲ್ಲರ ಸಹಕಾರ ಅಗತ್ಯವಾಗಿದೆ ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರೂ ಆಗಿರುವ ಕೆ.ಜಿ.ಶಾಂತಿ ಅವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಮತ್ತು ಕಾರ್ಮಿಕ ಇಲಾಖೆ ವತಿಯಿಂದ ಜೀತ ಕಾರ್ಮಿಕ ಪದ್ಧತಿ ವಿರೋಧಿ ದಿನಾಚರಣೆ ಅಂಗವಾಗಿ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ನಗರದ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಬುಧವಾರ ಏರ್ಪಡಿಸಿದ್ದ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

ಆರ್ಥಿಕ ಸ್ಥಿತಿ ಕಡಿಮೆಯಾದಾಗ ಜೀತ ಪದ್ಧತಿಯು ಉಲ್ಬಣಗೊಳ್ಳುತ್ತದೆ. ಪೂರ್ವಜರ ಕಾಲದಲ್ಲಿ ಜೀತ ಪದ್ಧತಿಯು ಆಳವಾಗಿ ಬೇರೂರಿತ್ತು. ಸ್ವಾತಂತ್ರ್ಯದ ನಂತರ ಗಣನೀಯವಾಗಿ ಕಡಿಮೆಯಾಗಿದೆ ಎಂದರು.

14 ವರ್ಷದೊಳಗಿನ ಮಕ್ಕಳನ್ನು ದುಡಿಮೆಗೆ ಬಳಸಿಕೊಳ್ಳುವುದು ಕಾನೂನು ಬಾಹಿರವಾಗಿದೆ. ಮಕ್ಕಳಿಗೆ ಶಿಕ್ಷಣ ಕೊಡಿಸಬೇಕು. ಶಿಕ್ಷಣದಿಂದ ಮಾತ್ರ ಜೀತ ಪದ್ಧತಿ ಸಂಪೂರ್ಣ ನಿರ್ಮೂಲನೆ ಮಾಡಲು ಸಾಧ್ಯ ಎಂದು ತಿಳಿಸಿದರು.

ಸಂವಿಧಾನವು ಪ್ರತಿಯೊಬ್ಬರಿಗೂ ಘನತೆಯಿಂದ ಬದುಕುವ ಹಕ್ಕು ನೀಡಿದೆ. ಸರ್ಕಾರವು ಶಿಕ್ಷಣ ಸೇರಿದಂತೆ ಹಲವಾರು ಸೌಲಭ್ಯಗಳನ್ನು ನೀಡುತ್ತಿದೆ. ಇವುಗಳ ಸದ್ಬಳಕೆಯಾಗಬೇಕು ಎಂದು ಹೇಳಿದರು.

ಜೀತ ಪದ್ಧತಿ ನಿರ್ಮೂಲನೆಗಾಗಿಯೇ ವಿವಿಧ ಇಲಾಖೆಗಳ ಜೊತೆಗೂಡಿ ಟಾಸ್ಕ್ ಫೋರ್ಸ್ ರಚಿಸಲಾಗಿದೆ. ವಿದ್ಯಾರ್ಥಿಗಳು ಸಹ ಜೀತ ಪದ್ಧತಿಯ ನಿಷೇಧದ ಬಗ್ಗೆ ನಿಮ್ಮ ಸ್ನೇಹಿತರಿಗೂ ತಿಳಿಸಬೇಕು. ಮನೆಯ ಅಕ್ಕ-ಪಕ್ಕದ ನೆರೆಹೊರೆಯವರಿಗೂ ಮಾಹಿತಿ ಹಂಚಿಕೊಳ್ಳಬೇಕು. ಜೀತ ಪದ್ಧತಿ ಇರುವುದು ಕಂಡುಬಂದಲ್ಲಿ ಹತ್ತಿರದ ಪೊಲೀಸ್ ಠಾಣೆಗೆ ಮಾಹಿತಿ ನೀಡಬೇಕು ಎಂದು ತಿಳಿಸಿದರು.

ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ಅಧ್ಯಕ್ಷತೆ ವಹಿಸಿ ಮಾತನಾಡಿ, 14 ವರ್ಷದೊಳಗಿನ ಎಲ್ಲಾ ಮಕ್ಕಳು ಉಚಿತ ಮತ್ತು ಕಡ್ಡಾಯ ಶಿಕ್ಷಣ ಪಡೆಯಬೇಕು. ಜಿಲ್ಲೆಯಲ್ಲಿ ಜೀತ ಪದ್ಧತಿ ಇಲ್ಲ. ಅನಿರ್ದಿಷ್ಟ ವಲಯ ಹಾಗೂ ಇತರೆ ಕೈಗಾರಿಕಾ ವಲಯಗಳಲ್ಲಿ ಜೀತ ಪದ್ಧತಿ ಕುರಿತು ಅರಿವು ಮೂಡಿಸುವ ಕಾರ್ಯಕ್ರಮ ಆಯೋಜಿಸಬೇಕು ಎಂದು ತಿಳಿಸಿದರು.

ಕಾರ್ಯಾಗಾರದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ್ದ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ನಿಕಟಪೂರ್ವ ಸದಸ್ಯರಾದ ಹೆಚ್.ಸಿ.ರಾಘವೇಂದ್ರ ಅವರು ಜೀತ ಕಾರ್ಮಿಕ ಪದ್ಧತಿ ವಿರೋಧಿ ಕುರಿತು ವಿಶೇಷ ಉಪನ್ಯಾಸ ನೀಡಿದರು.

ಈ ಸಂದರ್ಭದಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶರಾದ ರಾಜೇಶ್ ಎನ್.ಹೊಸಮನೆ, ಅಪರ ಜಿಲ್ಲಾಧಿಕಾರಿ ಮಹಮ್ಮದ್ ಝುಬೇರ್, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ನವೀನ್ ಕುಮಾರ್, ಜಿಲ್ಲಾ ಬಾಲ ಕಾರ್ಮಿಕ ಯೋಜನೆಯ ಯೋಜನಾಧಿಕಾರಿ ಎ.ಮೌನೇಶ್, ಕಾರ್ಮಿಕ ಅಧಿಕಾರಿ ಸಿದ್ದಪ್ಪ ಖೈನೂರ ಸೇರಿದಂತೆ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ಶಾಲಾ ಮಕ್ಕಳು, ಮತ್ತಿತರರು ಉಪಸ್ಥಿತರಿದ್ದರು.

**ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ.**
**ಕೈಯಲ್ಲೊಂದು ಕನ್ನಡ ದಿನ ಪತ್ರಿಕೆ ಇರಲಿ.**
ಡಿ..ವಿ.ಜಿ.

## ನೀವೂ ಬರೆಯಬಹುದು

**ಹಂಪಿ ಟೈಮ್ಸ್** ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

### ಬೆಳಕಿನ ಹಾದಿ

ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.


-: ಸಂಪಾದಕರು :-

ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.
ಇ-ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
- ಜಾಹೀರಾತು ವ್ಯವಸ್ಥಾಪಕರು.

# ಇಂದಿನ ಯುವಜನತೆ ಕಳೆದು ಹೋಗಿರುವುದಾದರೂ ಎಲ್ಲಿ..? ಅವರಲ್ಲಿ ಸದಭಿರುಚಿಯ ಕಿಚ್ಚನ್ನು ಬಡಿದೆಬ್ಬಿಸುವ ಬಗೆ ಹೇಗೆ ?



ಯುವ ಶಕ್ತಿ ದೇಶದ ಬೆನ್ನೆಲುಬು. ಒಂದು ದೇಶದ ಪ್ರಗತಿ ಅದರ ಜನಸಂಖ್ಯೆಯ ಶೇಕಡಾವಾರು ಯುವಕರ ಸಂಖ್ಯೆಗೆ ಹೋಲಿಸ ಲಾಗುತ್ತದೆ. ವಿಶ್ವದಲ್ಲಿ ಭಾರತ ಅತ್ಯಂತ ಹೆಚ್ಚು ಯುವಕರನ್ನು ಹೊಂದಿದೆ. ಭಾರತದ ಜನಸಂಖ್ಯೆಯಲ್ಲಿ ಶೇಕಡಾ 66% ಯುವಕರೇ ಆಗಿದ್ದಾರೆ. ಇದು ದೇಶಕ್ಕೆ ಸಂದ ವರ. ಯುವಕರೇ ದೇಶದ ದುಡಿ ಯುವ ಯಂತ್ರ. ದೇಶದ ಆರ್ಥಿಕತೆ ದುಡಿಯುವ ವರ್ಗದ ಮೇಲೆ ನಿರ್ಧಾರಿತವಾಗಿದೆ .

ಆದರೆ ಒಂದು ವಿಪರ್ಯಾಸ ಇಲ್ಲಿ ಅಡಗಿದೆ. ಯುವಜನರ ಸಂಖ್ಯೆಯಲ್ಲಿ ಭಾರತ ಮೊದಲ ದೇಶವಾಗಿದ್ದರೂ ಇನ್ನೂ ಅಭಿವೃದ್ಧಿ ಹೊಂದುತ್ತಿರುವ ದೇಶವಾಗಿದೆ. ಅಮೇರಿಕಾ ಜಪಾನ್ ಜರ್ಮನಿ ಗಳಂತೆ ಮುಂದುವರೆದ ದೇಶಗಳ ಸಾಲಿಗೆ ಸೇರುವತ್ತ ಹೆಜ್ಜೆ ಇಡುತ್ತಿದೆ ಆದರೆ ಇನ್ನೂ ತಲುಪಿಲ್ಲ. ನಮ್ಮಲ್ಲಿರುವ ಯುವ ಜನರ ಅಗಾಧ ಶಕ್ತಿ ಇನ್ನೂ ಪೂರ್ಣ ಪ್ರಮಾಣದಲ್ಲಿ ಪ್ರವಹಿಸುತ್ತಿಲ್ಲ. ಹಾಗಾದರೆ ಯುವಶಕ್ತಿಯ ಸುಪ್ತತೆಗೆ ಕಾರಣಗಳೇನು, ಅವರು ಕಳೆದು ಹೋಗಿರುವುದಾದರೂ ಎಲ್ಲಿ ...

ನಮ್ಮ ಇಂದಿನ ಯುವಜನತೆಯಲ್ಲಿ ಮುಖ್ಯವಾಗಿ ದೇಶದ ಹಾಗೂ ಸಂಸ್ಕೃತಿಯ ಬಗ್ಗೆ ಅರಿವಿನ ಕೊರತೆಯಿದೆ. ಇದು ನಮ್ಮ ಅಸ್ಮಿತೆಗೆ ಧಕ್ಕೆ ಉಂಟುಮಾಡುತ್ತದೆ. ಇದಕ್ಕೆ ಐತಿಹಾಸಿಕ ಹಾಗೂ ಮನೋ ವೈಜ್ಞಾನಿಕ ಕಾರಣ ಇದೆ. ಭಾರತ ಒಂದು ಕಾಲದಲ್ಲಿ ಎಲ್ಲ ಕ್ಷೇತ್ರಗಳಲ್ಲಿಯೂ ಉಚ್ಛ್ರಾಯದಲ್ಲಿತ್ತು. ಕಾಲಕ್ರಮೇಣ ನಮ್ಮ ಒಗ್ಗಟ್ಟಿನ ಕೊರತೆ ಪರಕೀಯರ ಧಾಳಿ ಬ್ರಿಟಿಷರ ಗುಲಾಮಿತನ ಅದರ ನಂತರ ಉಳಿದ ಮಾನಸಿಕ ದಾಸ್ಯ ಹೀಗೆ ಹಲವು ಪರಿಸ್ಥಿತಿಗಳು ನಮಗೆ ನಮ್ಮದೇ ಸಂಸ್ಕೃತಿಯ ನೆಲದ ಬಗ್ಗೆ ಕೀಳರಿಮೆ ಮೂಡಿಸಲು ಅನುವಾಯಿತು. ಭಾರತವನ್ನು ದಾಸ್ಯದಲ್ಲೇ ಇಡಲು ಬಯಸಿದ್ದ ಬ್ರಿಟೀಷರು ಮೆಕಾಲೆಯಾಧಾರಿತ ಶಿಕ್ಷಣದಿಂದ ನಮ್ಮ ಅಸಲಿ ಇತಿಹಾಸ ಮರೆಮಾಚಿದರು. ನಿಜವಾದ ತ್ಯಾಗ ಬಲಿದಾನದ ಕಥೆ ದೂರಾಯಿತು . ಸಾಧಕರನ್ನು ದೂರ ತಳ್ಳಿ ಕೆಲವರನ್ನು ವೈಭವೀಕರಿಸಿ ಸತ್ಯ ಮರೆಮಾಚಲಾಯಿತು. ಸ್ವಾತಂತ್ರ ಬಂದ ಮೇಲೂ ಆಡಳಿತ ವರ್ಗ ಹಾಗೂ ಜನಸಾಮಾನ್ಯರ ಅಂತರ ದೂರವೇ ಆಯಿತು. ಬಡತನ ನಿರುದ್ಯೋಗ ಭ್ರಷ್ಟಾಚಾರ ಜನರನ್ನು ಮುಖ್ಯವಾಗಿ ಒಂದು ಕಾಲದಲ್ಲಿ ಯುವಜನರನ್ನು ಹತಾಶ ಸ್ಥಿತಿಗೆ ತಳ್ಳಿದ್ದು ಸುಳ್ಳಲ್ಲ. ಯುವಕರು ತಮ್ಮ ಶಕ್ತಿ ತಮ್ಮ ನೆಲೆ ಹಾಗೂ ತಮ್ಮ ಸಾಧನೆ ತೋರುವ ಹಂಬಲ ಹಾಗೂ ಯಶಸ್ಸನ್ನು ಸಾಧಿಸುವ ಪೂರಕ ವಾತಾವರಣ ಸಿಗದಾದಾಗ ಕಟ್ಟು ಪಾಡಿರದ ಮುಕ್ತ ಪ್ರಪಂಚದ ಸಾಧಿಸುವ ಅವಕಾಶವಿರುವ ಪ್ರತಿಭೆಗೆ ಬೆಲೆ ಇರುವ ಪಾಶ್ಚಾತ್ಯ ದೇಶಗಳಾದ ಅಮೇರಿಕಾ ಯೂರೋಪ್ ಜಪಾನ್ ದೇಶಗಳತ್ತ ಮುಖ ಮಾಡಲು ಶುರು ಮಾಡಿದರು. ಅಲ್ಲಿ ಸಿಕ್ಕ ಯಶಸ್ಸು ಹಣ ಕೀರ್ತಿ ನಮ್ಮ ದೇಶದ ಸಂಸ್ಕೃತಿಯ ಬೇರುಗಳನ್ನೇ ಮರೆಯುವಂತೆ ಮಾಡಿತು . ಮೈ ಬಣ್ಣದಿಂದ ಹಿಡಿದು ಪಾಶ್ಚಾತ್ಯರಿಂದ ಬಂದಿದ್ದೆಲ್ಲಾ ಶ್ರೇಷ್ಠ. ಭಾರತ ದೇಶದ ಜನರಿಂದ ಹಿಡಿದು ರಫ್ತಾಗುತ್ತಿದ್ದ ಅಕ್ಕಿ ಬಟ್ಟೆಯೂ ಕಳಪೆ ಎಂಬ ಭಾವ ತಮ್ಮ ಮೈ ಮನಗಳನ್ನು ವಿದೇಶಿ ಸಂಸ್ಕೃತಿಗೆ ಅಡವಿಟ್ಟಿದ್ದು ದಾಸ್ಯದ ಮುಂದುವರೆದ ಭಾಗವಷ್ಟೇ.



ಚೇತನ ಭಾರ್ಗವ
ಬೆಂಗಳೂರು ಹವ್ಯಾಸಿ ಬರಹಗಾರ್ತಿ
Scan For Digital Colourful
HAMPI TIMES E-paper

ಅ ಸ ಲೀ ೦ ು ು ತೇ ೦ ು ು ಸತ್ಯದಿಂದ ದೂರಾಗಿರುವುದೇ ಯುವಜನತೆಯ ದೌರ್ಭಾಗ್ಯ. ಇಂದು ದೇಶ ತಾಂತ್ರಿಕತೆಯಲ್ಲಿ ಆರ್ಥಿಕತೆಯಲ್ಲಿ ಹಾಗೂ ಸಾರಿಗೆ ಸಂಪರ್ಕದಲ್ಲಿ ಔನತ್ಯ ಸಾಧಿಸಿದ್ದರೂ ದೇಶದ ಭಾಷೆಯ ಸಂಸ್ಕೃತಿಯ ಅಸಲಿ ಬೇರುಗಳಿಂದ ದೂರಾಗಿರುವುದೇ ಯುವ ಜನತೆ ಪೋಷಕಾಂಶವಿಲ್ಲದ ಸಸ್ಯ ದಂತೆ ಸೊರಗಿದೆ. ವಿದೇಶಿ ಅನುಕರಣೆ ಭಾಷೆ ಸಂಸ್ಕೃತಿಯ ಹೀಗಳಿಕೆ, ನಾಗರಿಕ ಸಮಾಜವನ್ನು ಹದ್ದುಬಸ್ತಿನಲ್ಲಿ ಒಂದು ಚೌಕಟ್ಟಿನಲ್ಲಿಟ್ಟದ್ದ ಸಂಪ್ರದಾಯ ಆಚರಣೆಗಳು ಹಬ್ಬ ಹರಿದಿನಗಳು ಯುವಜನತೆಯ ದೃಷ್ಟಿಯಲ್ಲಿ ಆಚರಣೆ ಕಳೆದುಕೊಂಡಿವೆ. ಒಟ್ಟಿನಲ್ಲಿ ವಿದೇಶಿ ಪ್ರಭಾವಕ್ಕೊಳಗಾದ ಯುವಜನತೆ ತನ್ನ ಅಸ್ತಿತ್ವ ಹುಡುಕುವ ಕಂಡುಕೊಳ್ಳುವ ಹುಡುಕಾಟದಲ್ಲಿದೆ . ಉತ್ತರ ಕಂಡುಕೊಳ್ಳುವ ವ್ಯವಧಾನವಿಲ್ಲದೆ ಬರಿಯ ತೋರಿಕೆಯ ಪ್ರಶ್ನೆಗಳಿಂದ ಪ್ರಗತಿಪರರೆಂದು ಜನರ ದಾರಿ ತಪ್ಪಿಸುವರ ವರ್ಗದಿಂದ ಯುವ ಜನತೆಯ ಸ್ಥಿತಿ ಅಯೋಮಯವಾಗಿದೆ. ಈ ಪರಿಸ್ಥಿತಿಯಲ್ಲಿ "ಏಳಿ ಎದ್ದೇಳಿ ಗುರಿ ಮುಟ್ಟುವ ತನಕ ನಿಲ್ಲದಿರಿ" ಎಂದು ಕರೆಕೊಟ್ಟು ಭಾರತೀಯರ ಚೈತನ್ಯವನ್ನು ಬಡಿದೆಬ್ಬಿಸಿ ಭಾರತದ ಸಂಸ್ಕೃತಿ ಸನಾತನ ಧರ್ಮದ ಮಾನವತೆಯನ್ನು ಸಾರಿದ ವಿವೇಕಾನಂದರ ಜೀವನ ಯಶೋಗಾಥೆ ಯುವಕರಿಗೆ ದಾರಿ ತೋರುವ ದಿಕ್ಸೂಚಿಯಾಗಿದೆ . ಹರೆಯದಲ್ಲಿ ಎಲ್ಲವನ್ನೂ ಪ್ರಶ್ನಿಸಿ ದೇವರಿದ್ದಾನೆಯೇ ಎಂದು ತಮ್ಮ ಗುರುವಾದ ರಾಮಕೃಷ್ಣರನ್ನು ಕೇಳುತ್ತಾ ಅವರ ಪ್ರಶ್ನೆಗೆ ಉತ್ತರ ಕಂಡುಕೊಳ್ಳುವ ಸಾಧನೆ ತಪಸ್ಸು ಗುರುವಿನ ಅನುಗ್ರಹ ಅವರನ್ನು ಸತ್ಯದ ದರ್ಶನಕ್ಕೆ ಎಡೆಮಾಡಿತು. ದೇಶದ ಅಪಾರ ಹಿರಿಮೆ ಧರ್ಮದ ಮೂಲ ಆಶಯ ಮಾನವೀಯತೆಯ ಸಂದೇಶ ಸಾರಲು ಗುರುವಿನ ಪ್ರೇರಣೆಯಂತೆ ಸರ್ವ ಧರ್ಮ ಸಮ್ಮೇಳನದಲ್ಲಿ ಭಾರತದ ಸನಾತನ ಧರ್ಮದ ಪ್ರತಿನಿಧಿಯಾಗಿ ಹಲವಾರು ಕಷ್ಟಗಳು ಬಂದರೂ ಅಮೆರಿಕೆಯ ಚಿಕಾಗೋ ತಲುಪಿ ಐತಿಹಾಸಿಕ ಭಾಷಣ ಮಾಡಿದ್ದು ಇಂದಿನ ಯುವ ಜನತೆಗೆ ಪ್ರೇರಣೆ ಹಾಗೂ ದಾರಿ ದೀಪವಾಗಬಲ್ಲ ವಿಷಯ. ಎಂತಹ ಪರಿಸ್ಥಿತಿ ಬಂದರೂ ವಿಚಲಿತರಾಗದೆ ನಮ್ಮ ದೇಶದ ಧರ್ಮದ ಮೂಲ ಆಶಯ ಸಾರಿ ಕೀರ್ತಿ ಪತಾಕೆ ಹಾರಿಸಿದ ಭಾರತ ಮಾತೆಯ ಸುಪುತ್ರ ವಿವೇಕಾನಂದರ ಧೃಢ ಸಂಕಲ್ಪ ನಮ್ಮ ಈಗಿನ ಯುವ ಜನತೆಯ ಕಳೆದು ಹೋದ ಮನಸ್ಥಿತಿಯ ಜಾಡ್ಯಕ್ಕೆ ಮದ್ದಾಗಬಲ್ಲದು .ಅವರ ಜೀವನ, ವಿಚಾರ ಧಾರೆ ,ಸಂಕಲ್ಪ ಶಕ್ತಿ , ಗುರಿಯ ಸ್ಪಷ್ಟತೆ ಹಾಗೂ ನೊಂದವರ ದೀನ ದಲಿತರ ನೋವಿಗೆ ಮಿಡಿಯುವ ಸೇವಾ ತತ್ಪರರಾಗುವ ಗುಣವೇ ಇಂದಿನ ಯುವಕರಿಗೆ ದಾರಿ ದೀಪ . ಸಂಬಂಧಗಳು ಸವಕಲಾಗುತ್ತಿರುವ ಈ ಸಮಯದಲ್ಲಿ ವಿವೇಕಾನಂದರ ಆದರ್ಶ ಹಾಗೂ ಧರ್ಮದ ಸಾರವೇ ಮಾನವೀಯತೆ ಹಾಗೂ ಮಾನವ ಕುಲದ ಉದ್ಧಾರ ಎಂದು ಯುವ ಜನತೆ ಅರಿತು ನಡೆದರೆ ಸಧಭಿರುಚಿ ತಾನಾಗಿಯೇ ಮೂಡುತ್ತದೆ . ಎಲ್ಲಿ ಪರಸ್ಪರ ಸೋದರತ್ವ ಬೆಸೆಯುವುದೋ ಅಲ್ಲಿ ಜಾತೀಯತೆ ಮೀರಿ ನಾವು ನಮ್ಮ ಮಿತಿಗಳನ್ನು ದಾಟಿ ಅಗಾಧವಾದನ್ನು ಸಾಧಿಸುವ ಸಾಧ್ಯತೆ ಇದೆ. ಯುವ ಜನತೆಗಂತೂ ಅದ್ಭುತಗಳನ್ನು ಮೆರೆಯುವ ಶಕ್ಯವಿದೆ . ಇಂದಿನ ಬದಲಾದ ಯುಗದ ಸಾಧ್ಯತೆ ಹರಹುಗಳನ್ನ ಮನಗಂಡು ಯುವ ಜನತೆ ಅನುಕರಣೆ ಬಿಟ್ಟು ಅನುಷ್ಠಾನದ ಹಾದಿ ಹಿಡಿದರೆ ಪ್ರಸ್ತುತ ಅಯೋಯಮಯವಾಗಿ ಕಳೆದು ಹೋಗಿರುವ ಸ್ಥಿತಿ ದೂರಾಗುತ್ತದೆ. ದೇಶ ಭಾಷೆಯ ಸಂಸ್ಕೃತಿಯ ಧರ್ಮದ ನಿಜವಾದ ಅರ್ಥ ನಮಗೆ ಗುರಿಯ ಸ್ಪಷ್ಟತೆ ನೀಡುತ್ತದೆ. ಸಾಧನೆಯ ಹಾದಿ ತುಳಿಯಲು ಪ್ರೇರೇಪಿಸುತ್ತದೆ. ವಿವೇಕ ಜಾಗೃತವಾಗಿ ಸದಭಿರುಚಿ ಸೃಜನಶೀಲತೆ ಮೂಡುತ್ತದೆ. ಆದ್ದರಿಂದ ಸತ್ಯದ ಅನ್ವೇಷಣೆ, ವಿವೇಕದ ಜಾಗೃತಿ ಹಾಗೂ ಗುರಿ ಸಾಧಿಸುವ ಛಲ ಇಂದಿನ ಯುವ ಜನರ ಅಗತ್ಯವಾಗಿದೆ. ಇದಕ್ಕೆ ನಮಗೆ ವಿವೇಕಾನಂದರ ಜೀವನವೇ ದೀಪಿಕೆಯಾಗಿದೆ. ಎಲ್ಲರಲ್ಲೂ ವಿವೇಕ ಜಾಗೃತವಾಗಲಿ. ಸುಪ್ತ ಚೈತನ್ಯವು ಚಲನಶೀಲವಾಗಲಿ.

# ದೈವ ಕೃಪೆ

■ **ವೀಣಾ ಹೇಮಂತ್ ಗೌಡ ಪಾಟೀಲ್** ಮುಂಡರಗಿ



ಕೆಲ ದಶಕಗಳ ಹಿಂದಿನ ಮಾತಿದು. ಓರ್ವ ವ್ಯಾಪಾರಿಯ ಬಳಿ ಕೆಲಸ ಮಾಡುತ್ತಿದ್ದ ನೌಕರ ತನ್ನ ಮಾಲೀಕನ ಬಳಿ ಬಂದು ಸ್ವಾಮಿ ನಾನು ಪುರಿ ಜಗನ್ನಾಥ ರಥಯಾತ್ರೆಗೆ ಹೋಗಿ ಬರುವೆ... ನನಗೆ ಕೆಲ ದಿನಗಳ ರಜೆ ಬೇಕು ಎಂದು ಕೇಳಿದ.

ತನ್ನ ವ್ಯಾಪಾರದ ಬಹುದೊಡ್ಡ ಕಾರುಬಾರಿನಲ್ಲಿ ಆತನಿಗೆ ದೈವ ದರ್ಶನ ಸಾಧ್ಯವಾಗುತ್ತಿರಲಿಲ್ಲ, ಅಂತೆಯೇ ತನ್ನ ಸೇವಕನಿಗೆ 100 ರೂ ಹಣವನ್ನು ಕೊಟ್ಟು ಹುಂಡಿಯಲ್ಲಿ ಹಾಕಿ ದೇವರಿಗೆ ತನ್ನನ್ನು ಆಶೀರ್ವದಿಸು ಎಂದು ಕೇಳಿಕೊಳ್ಳಬೇಕೆಂದು ಸೇವಕನಿಗೆ ಹೇಳಿ ಆತನಿಗೆ ರಜೆ ಕೊಟ್ಟು ಕಳುಹಿಸಿದ.

ಆಗಲಿ ಎಂದು ತಲೆ ಆಡಿಸಿದ ಸೇವಕ ಮನೆಗೆ ಬಂದು ಎಲ್ಲ ತಯಾರಿಯನ್ನು ಮಾಡಿಕೊಂಡು ಪುರಿಯ ಜಗನ್ನಾಥ ರಥಯಾತ್ರೆಗೆ ಹೊರಟ. ಮಾರ್ಗ ಮಧ್ಯದಲ್ಲಿ ಅದೆಷ್ಟೋ ಸಂತರು ಸನ್ಯಾಸಿಗಳು ಹೊರಟಿದ್ದು ಆಹಾರ ದೊರೆಯದೆ ತಾಪತ್ರಯ ಅನುಭವಿಸುವುದನ್ನು ಕಂಡು ತನ್ನ ಯಜಮಾನ ಕೊಟ್ಟ ನೂರು ಹಣದಲ್ಲಿ ಸುಮಾರು 98 ರೂಗಳನ್ನು ಖರ್ಚು ಮಾಡಿ ಅವರಿಗೆ ಊಟದ ವ್ಯವಸ್ಥೆ ಮಾಡಿದ. ಮುಂದೆ ಪುರಿ ಕ್ಷೇತ್ರವನ್ನು ತಲುಪಿ ರಥಯಾತ್ರೆಯ ವೈಭವವನ್ನು ಕಣ್ತುಂಬಿಕೊಂಡ. ನಂತರ ದೇಗುಲವನ್ನು ದರ್ಶಿಸಿ ಬಲರಾಮ ಮತ್ತು ಸುಭದ್ರೆಯರೊಂದಿಗೆ ವಿರಾಜಮಾನನಾಗಿದ್ದ ಜಗನ್ನಾಥ ದೇವರನ್ನು ಭಕ್ತಿಯಿಂದ ದರ್ಶಿಸಿ ಅಲ್ಲಿ ಉಳಿದ ಎರಡು ರೂ ಹಣವನ್ನು ದೇವರ ಗುಂಡಿಗೆ ಹಾಕಿ ನಮ್ಮೆಲ್ಲರ ಯೋಗ ಕ್ಷೇಮವನ್ನು ನೋಡಿಕೊಳ್ಳುವ ನನ್ನ ಮಾಲೀಕನಿಗೆ ಆಶೀರ್ವದಿಸು ಎಂದು ದೇವರಲ್ಲಿ ಬೇಡಿಕೊಂಡ.

ಇತ್ತ ಶ್ರೀಮಂತನ ಕನಸಿನಲ್ಲಿ ಪುರಿಯ ಜಗನ್ನಾಥ ದೇವರು ಪ್ರತ್ಯಕ್ಷನಾಗಿ 'ಭಕ್ತ, ನೀನು ಕಳುಹಿಸಿದ 98 ರೂಗಳು ನನಗೆ ಮುಟ್ಟಿದವು ನಿನಗೆ ಒಳ್ಳೆಯದಾಗಲಿ' ಎಂದು ಆಶೀರ್ವದಿಸಿದಂತೆ ಭಾಸವಾಯಿತು. ಎಚ್ಚರಗೊಂಡ ಆತ ನನ್ನ ಸೇವಕ ದೇವರಿಗೆ 98 ರೂಗಳನ್ನು ಅರ್ಪಿಸಿದ್ದಾನೆ,ಹಾಗಾದರೆ ಇನ್ನುಳಿದ ಎರಡು ರೂಗಳನ್ನು ಏನು ಮಾಡಿರಬಹುದು ಎಂದು ಕುತೂಹಲದಿಂದ ಇದ್ದ.

ಯಾತ್ರೆಯಿಂದ ಮರಳಿದ ಸೇವಕ ಪ್ರಸಾದದ ಪೊಟ್ಟಣವನ್ನು ಹಿಡಿದು ಮಾಲೀಕನನ್ನು ಭೇಟಿಯಾಗಿ ಕುಂಕುಮ ಅಕ್ಷತೆ ಮತ್ತು ಪ್ರಸಾದವನ್ನು ಮಾಲೀಕನ ಕೈಗೆ ನೀಡಿದ.

ಆಗ ಮಾಲಿಕ ದೇವರು ತನ್ನ ಕನಸಿನಲ್ಲಿ ಪ್ರತ್ಯಕ್ಷವಾಗಿ 98 ರೂಗಳು ಸಂದಾಯವಾಗಿರುವುದನ್ನು ಹೇಳಿದನೆಂದು ಸೇವಕನಿಗೆ ತಿಳಿಸಲು ಆ ಸೇವಕನು ಆಶ್ಚರ್ಯಗೊಂಡ.

ಮಾಲೀಕರೇ, ನೀವು ಕೊಟ್ಟ ನೂರು ರೂಪಾಯಿಯಲ್ಲಿ 98 ರೂ ಹಣವನ್ನು ನಾನು ಯಾತ್ರೆಗೆ ಹೊರಟಿದ್ದ ಸಾಧು ಸಂತರಿಗೆ ಊಟದ ವ್ಯವಸ್ಥೆಗಾಗಿ ಖರ್ಚು ಮಾಡಿ ಇನ್ನುಳಿದ ಎರಡು ರೂಗಳನ್ನು ಮಾತ್ರ ದೇವರ ಹುಂಡಿಗೆ ಹಾಕಿದೆ ಎಂದು ನಿಜವನ್ನು ಅರುಹಿದ.

ಇದೀಗ ದೇವರ ನಿಜವಾದ ಪ್ರೀತಿಗೆ, ಅನುಗ್ರಹಕ್ಕೆ ಪಾತ್ರರಾಗಲು ಏನು ಮಾಡಬೇಕೆಂಬುದನ್ನು ಅರಿತ ಮಾಲೀಕ ತನ್ನ ಸೇವಕನ ಬೆನ್ನು ತಟ್ಟಿ ಸಾಧು ಸಂತರಿಗಾಗಿ ನೀನು ಖರ್ಚು ಮಾಡಿದ 98 ರೂಪಾಯಿಗಳು ನೇರವಾಗಿ ದೇವರನ್ನು ತಲುಪಿದೆ. ಹುಂಡಿಗೆ ನೀನು ಹಾಕಿದ ಎರಡು ರೂಪಾಯಿ ದೇವಸ್ಥಾನದ ಆಡಳಿತವರ್ಗಕ್ಕೆ ತಲುಪಿದೆ ಎಂದು ಸಂಪ್ರೀತನಾಗಿ ಹೇಳಿದ.

ಅದೆಷ್ಟು ಸುಂದರವಾದ ಕಥೆ ಅಲ್ಲವೇ ಸ್ನೇಹಿತರೆ? ದೇವರು ನಮ್ಮ ಮೇಲೆ ಕರುಣೆ ತೋರಲಿ ಎಂಬ ಆಶಯದಿಂದ ನಾವು ದೇವಸ್ಥಾನಕ್ಕೆ ಕಾಣಿಕೆ ನೀಡುತ್ತೇವೆ. ಆದರೆ ದೇವರು ಸಂಪ್ರೀತನಾಗುವುದು ನಾವು ನಮಗಿಂತ ಕಡಿಮೆ ಸ್ಥಿತಿಯಲ್ಲಿರುವ ಜನರ, ದೀನ ದುರ್ಬಲರ ಸೇವೆಗೆ ಆ ಹಣವನ್ನು ಬಳಸಿದಾಗ ಎಂಬ ಸತ್ಯವನ್ನು ನಾವು ಅರಿಯಬೇಕು.

ಇಂಥದೇ ಒಂದು ನೀತಿಯನ್ನು ಬುದ್ಧ ಭಗವಂತನ ಕಥೆಯ ಮೂಲಕ ಅರಿಯಬಹುದು. ಮಕ್ಕಳಿಲ್ಲದ ಓರ್ವ ಮಹಿಳೆ ತನಗೆ ಮಕ್ಕಳ ಭಾಗ್ಯವನ್ನು ಕರುಣಿಸು ಎಂದು ಬುದ್ಧ ಭಗವಾನನಲ್ಲಿ ಕೇಳಿದಾಗ ಮರುದಿನ ರುಚಿಕರವಾದ ಪಾಯಸವನ್ನು ಮಾಡಿ ತರಲು ಹೇಳಿದ.

ಮೊದಲೇ ಶ್ರೀಮಂತ ಮಹಿಳೆ... ಬುದ್ಧ ಭಗವಾನನೇ ಹೇಳಿದನೆಂದ ಮೇಲೆ ಕೇಳಬೇಕೇ?. ತುಪ್ಪದಲ್ಲಿ ಶಾವಿಗೆಯನ್ನು, ಗೋಡಂಬಿ ಬಾದಾಮಿ, ದ್ರಾಕ್ಷಿಗಳನ್ನು ಹದವಾಗಿ ಹುರಿದು,ಬಾಡಿಸಿಕೊಂಡು ಹಾಲಿನಲ್ಲಿಯೇ ಪಾಯಸವನ್ನು ಮಾಡಿ ಒಂದು ಡಬ್ಬದಲ್ಲಿ ತುಂಬಿದ ಆಕೆ ಬುದ್ಧ ದರ್ಶನಕ್ಕೆ ಹೊರಟಳು. ಘಮ್ಮೆಂದು ಹೊರ ಸೂಸುವ ಪಾಯಸದ ವಾಸನೆಯಿಂದ ಆಕರ್ಷಿತರಾದ ಮಕ್ಕಳು ಪಾಯಸದ ಆಸೆಗಾಗಿ ಆಕೆಯ ಬೆಂಬತ್ತಿದರು.

ಹಾಗೆ ಆಕೆಯ ಹಿಂದೆ ಬೆನ್ನು ಹತ್ತಿದ ಮಕ್ಕಳನ್ನು ಗದರಿಸಿದ ಆಕೆ ಪಾಯಸದ ಪಾತ್ರೆಯನ್ನು ಹೊತ್ತು ಬುದ್ಧ ಭಗವಾನನ ದರ್ಶನಕ್ಕೆ ಬಂದಳು. ಪಾಯಸದ ಪಾತ್ರೆಯನ್ನು ಬುದ್ಧನ ಮುಂದೆ ಇಟ್ಟಾಗ ಅದರ ವಾಸನೆಯನ್ನು ಆಘ್ರಾಣಿಸಿದ ಬುದ್ಧ ಭಗವಾನ್ ದಾರಿಯಲ್ಲಿ "ಪಾಯಸ ಕೊಡು ಎಂದು ನಿನಗೆ ಯಾರೂ ಬೆಂಬತ್ತಲಿಲ್ಲವೇ' ಎಂದು ಕೇಳಿದನು.

"ಅಯ್ಯೋ ಸ್ವಾಮಿ! ಸಾಕಷ್ಟು ಜನ ಮಕ್ಕಳು ಪಾಯಸ ಕೊಡು ಎಂದು ನನ್ನ ಹಿಂಬಾಲು ಬಿದ್ದರು, ಆದರೆ ನಾನು ಅವರೆಲ್ಲರನ್ನು ಗದರಿಸಿ ನಿಮಗಾಗಿ ಈ ಪಾಯಸವನ್ನು ತಂದೆ" ಎಂದು ಹೇಳಿದಳು.

ಆಕೆಯ ಮಾತನ್ನು ಕೇಳಿ ನಸುನಕ್ಕ ಬುದ್ಧ ಭಗವಾನ್ "ಅಷ್ಟೆಲ್ಲ ಮಕ್ಕಳು ಕೇಳಿದರೂ ನೀನು ತುಸು ಪಾಯಸವನ್ನು ಆ ಮಕ್ಕಳಿಗೆ ನೀಡಲಿಲ್ಲ ಎಂದಾಗ ನಿನಗೆ ಮಕ್ಕಳು ಏಕೆ ಬೇಕು?" ಎಂದು ಪ್ರಶ್ನಿಸಿದ.

ತನ್ನ ತಪ್ಪಿನ ಅರಿವಾಗಿ ತುಸು ಲಜ್ಜೆಯಿಂದ ತಲೆ ತಗ್ಗಿಸಿದ ಆಕೆ 'ಭಗವಾನ್, ನಿಜವಾಗಿಯೂ ನನ್ನಿಂದ ಮಹಾಪರಾಧವಾಗಿದೆ ನನ್ನ ತಪ್ಪನ್ನು ಮನ್ನಿಸಿ' ಎಂದು ಕೇಳಿಕೊಂಡಳು.

ಸ್ನೇಹಿತರೆ, ದೇವರು ಗುಡಿಯಲ್ಲಿ ಶಿಲೆಯ ರೂಪದಲ್ಲಿ ಇರುತ್ತಾನೆ ಎಂದು ನಾವು ತಿಳಿದುಕೊಂಡಿದ್ದೇವೆ, ಆದರೆ ದೇವರು ನಮ್ಮೆಲ್ಲರಲ್ಲೂ ಇದ್ದಾನೆ. ಈ ಜಗತ್ತಿನ ಪ್ರತಿಯೊಂದು ಕಣವು ಕೂಡ ಆ ದೇವರ ರೂಪವೇ. ನಮ್ಮ ಬಳಿ ಇರುವುದನ್ನು ಹಂಚಿ ತಿನ್ನುವ, ಬೇರೆಯವರ ಬಳಿ ಇಲ್ಲದೆ ಹೋದಾಗ ಅವರಿಗೆ ಸಹಾಯ ಮಾಡುವ ನೈತಿಕ ಜವಾಬ್ದಾರಿ ನಮ್ಮದಾಗಿರಬೇಕು. ಕೊಡುವವರು ಕೀಳಲ್ಲ, ಕೊಟ್ಟವನು ಮೇಲಲ್ಲ. ನಾವೆಲ್ಲರೂ ಒಂದು ರೀತಿಯಲ್ಲಿ ಕೇಳುವ ವರ್ಗದವರೇ... ಇಲ್ಲದವರು ಇದ್ದವರ ಬಳಿ ಬೇಡಿದರೆ, ಇದ್ದವರು ದೇವರ ಬಳಿ ಬೇಡುತ್ತಾರೆ. ನಮ್ಮ ಬಳಿ ಇರುವುದರ ಕುರಿತು ದರ್ಪ, ಅಹಂಭಾವ ತೋರದೆ ಬೇರೊಬ್ಬರಿಗೆ ಸಹಾಯ ಮಾಡುವ ಅವಕಾಶವನ್ನು ಆ ದೇವರು ನಮಗೆ ಒದಗಿಸಿದ್ದಾನೆ ಎಂಬ ಕೃತಜ್ಞತೆಯನ್ನು ಹೊಂದಿದ್ದು ಬದುಕಿನಲ್ಲಿ ಮುನ್ನಡೆಯಬೇಕು ಅದುವೇ ಮಾನವನ ಸಹಜ ಧರ್ಮವಾಗಿರಬೇಕು. ಏನಂತೀರಾ ಸ್ನೇಹಿತರೇ?

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

## ಕವಿ ಮನಸು

### ಕಾಣದ ಕಡಲಿಗೆ

ಮನವು ಹಂಬಲಿಸಿದೆ
ಕಾಣದ ಕಡಲಿಗೆ
ಹಾರಲು ಕಾದಿದೆ
ಅಗಾಧ ಬಾನಿಗೆ

ಜೀವವಿದು ಕ್ಷಣಿಕ
ಸರಿಯುತಿದೆ ಸಮಯ
ಭಾವನೆಗಳ ಜಳಕ
ಮುಳುಗೇಳುತಿದೆ ಹೃದಯ

ಅರಿಯಬಲ್ಲೆವೇ ಮರ್ಮ
ಬಾಳಿನ ಗುರಿಯ
ಕರಗಲಿ ನಮ್ಮ ಕರ್ಮ
ಸೇರುವ ಹರಿಯ

~ ಚೇತನ ಭಾರ್ಗವ, ಬೆಂಗಳೂರು

### ತಪ್ಪು ಹಾದಿ


ಯಾರಿರಲಿ ತಪ್ಪೆಸಗೆ ಶಿಕ್ಷಿಸುವ ಧೃಡತೆಯಲಿ
ಸಮಚಿತ್ತ ಇರುವವನು ನಿಜದ ಯಜಮಾನ
ತನ್ನವರ ತಪ್ಪುಗಳ ಕಣ್ಣೆದುರೆ ಮರೆಮಾಚಿ
ಮಂದಿಯನು ವಂಚಿಪುದು ಎಂಥ
ಅವಮಾನ

ತಪ್ಪಿಸಲು ಅವಕಾಶ ಕೊಡದಂತೆ
ಬಂಧಿಸುತ
ಸತ್ಯಾಂಶ ಹೊರತರಲಿ ನ್ಯಾಯಾಲಯ
ಅಪರಾಧಿ ಯಾರೆಂದು ಅರಿವಿದ್ದು
ಮನದೊಳಗೆ
ರಕ್ಷಣೆಯ ನೀಡುವುದು ದೊಡ್ಡ ಅನ್ಯಾಯ

ತನ್ನತ್ತ ವಾಲಿದವ ಎಂದೆನುವ ಭ್ರಮೆಯಲ್ಲಿ
ರಕ್ಷಿಸಲು ಮಾಡುವರು ಅತಿ ಕೆಟ್ಟ ಕೆಲಸ
ಈ ಪರಿಯ ನಡವಳಿಕೆ ಹಿತವಲ್ಲ ಅರಿವಿರಲಿ
ತಲೆದಂಡ ತೆರಬೇಕು ಮುಂದೊಂದು
ದಿವಸ॥

– ಪೆರ್ಮುಖ ಸುಬ್ರಹ್ಮಣ್ಯ ಭಟ್

ಭಾವಪೂರ್ಣ ಶ್ರದ್ಧಾಂಜಲಿ
ನಿಧನ - ಪುಣ್ಯ ಸ್ಮರಣೆ
ಜಾಹೀರಾತುಗಳಿಗೆ
ವಿಶೇಷ ರಿಯಾಯತಿ
ನಿಧನದ ಬಗ್ಗೆ ಕುಟುಂಬ, ಸ್ನೇಹಿತರು, ಮತ್ತು ಪರಿಚಿತರಿಗೆ ಶೀಘ್ರ ಮತ್ತು ಸರಿಯಾದ ಮಾಹಿತಿ ನೀಡಲು ಇದು ನೆರವಾಗುತ್ತದೆ.
ಜಾಹೀರಾತು ನೀಡಲು ಸಂಪರ್ಕಿಸಿ
ಹಂಪಿ ಟೈಮ್ಸ್
94486 33038



### ತುಂಗಭದ್ರಾ ನೀರಿನ ಮಟ್ಟ

ಬುಧವಾರ : 12–02–2025

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1613.60 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 6687 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 45.180 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

ಕಳೆದ ವರ್ಷ ಇದೇ ದಿನ

| | |
|---|---|
| ಇಂದಿನ ಮಟ್ಟ | 1587.98 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 76 ಕ್ಯುಸೆಕ್ |
| ಸಾಮರ್ಥ್ಯ | 9.423 ಟಿಎಂಸಿ |

### ನಿತ್ಯ ಪಂಚಾಂಗ

ಮಾಸ: ಮಾಘ । ಸಂವತ್ಸರ: ಕ್ರೋಧಿ

13–02–2025 – ಗುರುವಾರ

| | |
|---|---|
| ತಿಥಿ | : ಪ್ರಥಮ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಮಾಘಾ |
| ಯೋಗ | : ಶೋಭನ |
| ಕರಣ | : ಬಾಳವ |
| ಸೂರ್ಯೋದಯ | : 07:01:49 |
| ಸೂರ್ಯಾಸ್ತ | : 18:20:42 |
| ರಾಹು ಕಾಲ | : 14:06–15:31 |
| ಯಮಘಂಡ ಕಾಲ | : 07:02–08:27 |
| ಗುಳಿಕ ಕಾಲ | : 09:52–11:16 |

# ಹಂಪಿ ಉತ್ಸವ ಸಕ್ಸಸ್‌ಗೆ ವಿವಿಧ ಸಮಿತಿಗಳಿಗೆ ಜವಾಬ್ದಾರಿ ಹಂಚಿಕೆ

**ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ಅಧಿಕಾರಿಗಳಿಗೆ ಸೂಚನೆ । ವಿವೇಚನಾಯುಕ್ತವಾಗಿ ಕಾರ್ಯನಿರ್ವಹಿಸಿ ಹೊಸಪೇಟೆಯಿಂದ 30 ಹಾಗೂ ಕಂಪ್ಲಿ ಪಟ್ಟಣದಿಂದ 10 ಸಾರಿಗೆ । ಪ್ರತಿ ಗ್ರಾಮಗಳಿಗೂ ಬಸ್**



■ **ಹಂಪಿ ಟೈಮ್ಸ್ ಹೊಸಪೇಟೆ**

ಫೆ.28, ಮಾ.1 ಮತ್ತು 2 ರಂದು ಮೂರು ದಿನಗಳ ಕಾಲ ಜರುಗುವ ವಿಶ್ವವಿಖ್ಯಾತ ಹಂಪಿ ಉತ್ಸವ ಆಚರಣೆಗೆ ದಿನಗಣನೆ ಶುರುವಾಗಿದೆ. ಯಶಸ್ವಿಯಾಗಿ ಉತ್ಸವ ಆಚರಿಸಲು ಜನಪ್ರತಿನಿ ಧಿಗಳು ಹಾಗೂ ಹಿರಿಯ ಅಧಿಕಾರಿಗಳ ನೇತೃತ್ವದಲ್ಲಿ 20 ವಿವಿಧ ಉಪ ಸಮಿತಿಗಳನ್ನು ರಚಿಸಲಾಗಿದೆ. ಈ ಸಮಿತಿಗಳು ತಮ್ಮ ಜವಾಬ್ದಾರಿ ಅರಿತು ಕಾರ್ಯ ನಿರ್ವಹಿಸಬೇಕು. ಕಾರ್ಯ ನಿರ್ವಹಿಸಲು ಅಧಿಕಾರಿಗಳಿಗೆ ಸಂಪೂರ್ಣ ಸ್ವಾತಂತ್ರ್ಯ ನೀಡಲಾಗಿದೆ. ಯಾವುದೇ ಚ್ಯುತಿ ಬಾರದಂತೆ ನಿಗಾವಹಿಸಬೇಕು ಎಂದು ಜಿಲ್ಲಾಧಿಕಾರಿ ಎಂ.ಎಸ್. ದಿವಾಕರ್ ಸೂಚನೆ ನೀಡಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಹಂಪಿ ಉತ್ಸವ 2025 ರ ಪೂರ್ವ ಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಬುಧವಾರ ಮಾತನಾಡಿ ದರು. ಹಿಂದಿನ ಬಾರಿಯಂತೆ ವಿವಿಧ ಸಮಿತಿಗಳನ್ನು ರಚಿಸಿ ಜವಾಬ್ದಾರಿಗಳನ್ನು ಹಂಚಿಕೆ ಮಾಡಲಾಗಿದೆ. ಪ್ರತಿಯೊಂದಕ್ಕೂ ಜಿಲ್ಲಾಧಿಕಾರಿ ಅನುಮತಿ ಬೇಕೆಂದು ಕಾಯದೇ, ವಿವೇಚನಾಯುಕ್ತವಾಗಿ ಕಾರ್ಯನಿರ್ವಹಿಸಬೇಕು. ಸಮಿತಿಗಳ ಅಧ್ಯಕ್ಷರು ಕೇಳುವ ಎಲ್ಲಾ ಸವಲತ್ತುಗಳನ್ನು ತಪ್ಪದೇ ಇತರೆ ಸಮಿತಿಗಳು ಒದಗಿಸಬೇಕು. ಪ್ರತಿ ಬಾರಿಯಂತೆ ಕೈಗಾರಿಕೆ, ಕೃಷಿ, ಫಲಪುಷ್ಪ ಪ್ರದರ್ಶನ, ಆಹಾರ ಮೇಳ, ಮತ್ಸ್ಯ ಮೇಳ, ಪುಸ್ತಕ ಪ್ರದರ್ಶನ, ಚಿತ್ರಕಲೆ, ಶಿಲ್ಪಕಲಾ ಪ್ರದರ್ಶನ, ಶ್ವಾನ, ಕುರಿ, ಎತ್ತುಗಳ ಸ್ಪರ್ಧೆ ಏರ್ಪಡಿಸಬೇಕು. ಕವಿಗೋಷ್ಠಿ, ಮಹಿಳಾ ವಿಚಾರ ಸಂಕಿರಣ ಹಾಗೂ ಹಂಪಿ ಇತಿಹಾಸ ಕುರಿತು ಗೋಷ್ಠಿಗಳ ಉದ್ಘಾಟನೆಗೆ ನಾಡಿನ ಪ್ರಖ್ಯಾತ ಕವಿಗಳು, ಸಂಪನ್ಮೂಲ ವ್ಯಕ್ತಿಗಳು, ಇತಿಹಾಸ ತಜ್ಞರನ್ನು ಆಹ್ವಾನಿಸಬೇಕು. ವೇದಿಕೆ, ವಸ್ತು ಪ್ರದರ್ಶನ ಮಳಿಗೆ, ಧ್ವನಿ ಬೆಳಕು ಸ್ಥಳಗಳಿಗೆ ಜೆಸ್ಕಾಂ ಅಧಿಕಾರಿಗಳು ವಿದ್ಯುತ್ ಸೌಲಭ್ಯ ನೀಡಬೇಕು. ಫೆ.28 ರಂದು ಮುಖ್ಯಮಂತ್ರಿ ಸಿದ್ಧರಾಮಯ್ಯನವರು ಹಂಪಿ ಉತ್ಸವ ಉದ್ಘಾಟನಾ ನೆರವೇರಿಸಲಿದ್ದಾರೆ. ಅಂದು ಕೆಕೆಆರ್ ಟಿಸಿಯಿಂದ ಪ್ರತಿ ಗ್ರಾಮಗಳಿಗೂ ಬಸ್ ವ್ಯವಸ್ಥೆ ಕಲ್ಪಿಸಬೇಕು. ಉತ್ಸವದ ಮೂರು ದಿನ ಜನರು ಹಂಪಿಗೆ ಆಗಮಿಸಲು ಹೊಸಪೇಟೆಯಿಂದ 30 ಹಾಗೂ ಕಂಪ್ಲಿ ಪಟ್ಟಣದಿಂದ 10 ಸಾರಿಗೆ ಬಸ್‌ಗಳನ್ನು ನಿಯೋಜಿಸಿ, ಸರತಿ ಮೇಲೆ ಕಾರ್ಯಾಚರಣೆ ನಡೆಸಬೇಕು. ಈ ಬಾರಿ ಬಿಸಿಲಿನ ಧಗೆ ಹೆಚ್ಚಿದ್ದು, ಪ್ರವಾಸಿಗರು ಹಾಗೂ ಸಾರ್ವಜನಿಕರ ಅನುಕೂಲಕ್ಕೆ ಖಾಸಗಿ ವ್ಯಕ್ತಿಗಳು ಸಹಕಾರದೊಂದಿಗೆ ಪ್ರಮುಖ ಜಾಗಗಳಲ್ಲಿ ಶುದ್ಧ ಕುಡಿಯುವ ನೀರಿನ ಅರವಟ್ಟಿಗೆ ನಿರ್ಮಿಸಬೇಕು. ತುರ್ತು ಸಂದರ್ಭದಲ್ಲಿ ಅಗತ್ಯ ಚಿಕಿತ್ಸೆ ನೀಡಲು ಆರೋಗ್ಯ ಇಲಾಖೆ ವತಿಯಿಂದ ತಾತ್ಕಾಲಿಕ ಆರೋಗ್ಯ ಕೇಂದ್ರಗಳನ್ನು ತೆರೆಯುವಂತೆ ನಿರ್ದೇಶನ ನೀಡಿದರು.

**ಹಂಪಿ ಉತ್ಸವ ಯಶಸ್ವಿಗೆ ಸಮಿತಿಗಳ ರಚನೆ :**
ಉತ್ಸವದ ಯಶಸ್ವಿಗಾಗಿ ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ಸ್ವಾಗತ ಮತ್ತು ಶಿಷ್ಟಾಚಾರ ಹಾಗೂ ಕಲಾವಿದರ ಆಯ್ಕೆ ಸಮಿತಿ, ಪ್ರಾದೇಶಿಕ ಸಾರಿಗೆ ಅಧಿಕಾರಿ ನೇತೃತ್ವದಲ್ಲಿ ಸಾರಿಗೆ ಸಮಿತಿ, ಹೊಸಪೇಟೆ ಅಭಿವೃದ್ಧಿ ಪ್ರಾಧಿಕಾರ ಆಯುಕ್ತರ ಅಧ್ಯಕ್ಷತೆಯಲ್ಲಿ ವಸತಿ ಹಾಗೂ ಧ್ವನಿ ಬೆಳಕು ಕಾರ್ಯಕ್ರಮ ಸಮಿತಿ, ಆಹಾರ ಇಲಾಖೆ ಉಪನಿರ್ದೇಶಕರ ಅಧ್ಯಕ್ಷತೆಯಲ್ಲಿ ಆಹಾರ ಸಮಿತಿ, ವಾರ್ತಾ ಇಲಾಖೆ ಹಿರಿಯ ಸಹಾಯ ನಿರ್ದೇಶಕರ ಅಧ್ಯಕ್ಷತೆಯಲ್ಲಿ ಪ್ರಚಾರ, ಜಾಹಿರಾತು ಮತ್ತು ಮಾಧ್ಯಮ ಸಮಿತಿ, ಅಪರ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಹಣಕಾಸು, ಆಹ್ವಾನ ಪತ್ರಿಕೆ, ಕರಪತ್ರ, ನೆನಪಿನ ಕಾಣಿಕೆ, ಪಾಸು, ಪ್ರಮಾಣ ಪತ್ರ, ಬ್ಯಾನರ್ ಹಾಗೂ ವೇದಿಕೆಗಳ ಸಮಿತಿ, ಜಿ.ಪಂ.ಉಪ ಕಾರ್ಯದರ್ಶಿಗಳ ಅಧ್ಯಕ್ಷತೆ ಮೂಲಭೂತ ಸೌಲಭ್ಯ ಹಾಗೂ ಕುಡಿಯುವ ನೀರಿನ ವ್ಯವಸ್ಥೆ ಸಮಿತಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಆರೋಗ್ಯ ಮತ್ತು ನೈರ್ಮಲೀಕರಣ ಸಮಿತಿ, ಪೊಲೀಸ್ ವರಿಷ್ಠಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಕಾನೂನು ಸುವ್ಯವಸ್ಥೆ ಸಮಿತಿ, ಕೃಷಿ ಇಲಾಖೆ ಜಂಟಿ ನಿರ್ದೇಶಕರ ಅಧ್ಯಕ್ಷತೆಯಲ್ಲಿ ಪ್ರದರ್ಶನ ಸಮಿತಿ, ಹಡಗಲಿ ತಾಲೂಕು ಪಂಚಾಯತಿ ಇಒ ಅಧ್ಯಕ್ಷತೆಯಲ್ಲಿ ಕ್ರೀಡಾ ಸಮಿತಿ, ಪ್ರವಾಸೋದ್ಯಮ ಉಪನಿರ್ದೇಶಕರ ಅಧ್ಯಕ್ಷತೆಯಲ್ಲಿ ಜಾನಪದ ವಾಹಿನಿ, ಶೋಭಾಯಾತ್ರೆ, ತುಂಗಾರತಿ, ವಸಂತ ವೈಭವ ಕಾರ್ಯಕ್ರಮಗಳು ಹಾಗೂ ಹಂಪಿ ಬೈಸ್ಕೈ ಸಮಿತಿ, ಪ್ರಾದೇಶಿಕ ಅಗ್ನಿಶಾಮಕ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ಅಗ್ನಿಶಾಮಕ ವ್ಯವಸ್ಥೆ ಸಮಿತಿ, ಪದವಿ ಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕರ ಅಧ್ಯಕ್ಷತೆಯಲ್ಲಿ ಪುಸ್ತಕ ಪ್ರದರ್ಶನ, ವಿಚಾರ ಸಂಕಿರಣ, ಕವಿಗೋಷ್ಠಿ ಸಮಿತಿ, ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಅಧ್ಯಕ್ಷತೆಯಲ್ಲಿ ಶಾಲಾ ಮಕ್ಕಳ ನೃತ್ಯ, ಚಿತ್ರಕಲಾ, ಪ್ರಬಂಧ ಸ್ಪರ್ಧೆ ಆಯೋಜನೆ ಸಮಿತಿಗಳನ್ನು ರಚಿಸಲಾಗಿದೆ. ಹೊಸಪೇಟೆ ಸಹಾಯಕ ಆಯುಕ್ತ ವಿವೇಕಾನಂದ, ಜಿ.ಪಂ.ಉಪಕಾರ್ಯದರ್ಶಿ ಭೀಮಪ್ಪ ಲಾಳಿ ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾಮಟ್ಟದ ಅಧಿಕಾರಿಗಳು ಭಾಗವಹಿಸಿದ್ದರು.

## ಫೆ.19 ರಂದು ಧ್ವನಿ ಮತ್ತು ಬೆಳಕು ಕಲಾವಿದರ ಆಯ್ಕೆ ಪ್ರಕ್ರಿಯೆ ಆರಂಭ

■ **ಹಂಪಿ ಟೈಮ್ಸ್ ಹೊಸಪೇಟೆ**

ಹಂಪಿ ಉತ್ಸವ 2025ರ ನಿಮಿತ್ತ 'ವಿಜಯ ವೈಭವ' ಬೃಹತ್ ಧ್ವನಿ ಮತ್ತು ಬೆಳಕು ಕಾರ್ಯಕ್ರಮದ ಕಲಾವಿದರ ಆಯ್ಕೆ ಪ್ರಕ್ರಿಯೆಯನ್ನು ಫೆ.19 ರಂದು ಹಮ್ಮಿಕೊಳ್ಳಲಾಗಿದೆ ಎಂದು ಡಿಸಿ ಎಂ.ಎಸ್.ದಿವಾಕರ್ ತಿಳಿಸಿದ್ದಾರೆ.

ಹಂಪಿಯ ಆನೆಲಾಯದ ಆವರಣದಲ್ಲಿ ಫೆ.28 ರಿಂದ ಮಾ.6 ಆಯೋಜಿಸಿರುವ ಧ್ವನಿ ಮತ್ತು ಬೆಳಕು ಕಾರ್ಯಕ್ರಮಕ್ಕೆ ಅವಶ್ಯಕತೆ ಇರುವ ಕಲಾವಿದರ ಆಯ್ಕೆ ಪ್ರಕ್ರಿಯೆಯನ್ನು ಫೆ.19 ರಂದು ಬೆ.10 ಗಂಟೆಯಿಂದ ನೌಕರರ ಭವನ, ಸಂಡೂರು ರಸ್ತೆ, ಹೊಸಪೇಟೆಯಲ್ಲಿ ಹಮ್ಮಿಕೊಳ್ಳಲಾಗಿದೆ. ಆಸಕ್ತ ಕಲಾವಿದರು ಮತ್ತು ಭರತ ನಾಟ್ಯ ಪರಿಣಿತರು ಆಯ್ಕೆ ಪ್ರಕ್ರಿಯೆಯಲ್ಲಿ ಭಾಗವಹಿಸಬಹುದಾಗಿದೆ. ಆಯ್ಕೆ ಪ್ರಕ್ರಿಯೆಯಲ್ಲಿ ಭಾಗವಹಿಸುವವರು ಎರಡು ಸ್ಟಾಂಪ್ ಸೈಜ್ ಫೋಟೋ ಮತ್ತು ಆಧಾರ್ ಕಾರ್ಡ್ ಮತ್ತು ಮತದಾರರ ಗುರುತಿನ ಚೀಟಿ, ಗೆಜೆಟೆಡ್ ಅಧಿಕಾರಿಗಳಿಂದ ಪಡೆದ ನಡತೆ ಪ್ರಮಾಣ ಪತ್ರ, ಈ ಹಿಂದೆ ಕಾರ್ಯಕ್ರಮದಲ್ಲಿ ಭಾಗವಹಿಸಿದ ದಾಖಲೆಗಳು ಹಾಗೂ ಸರ್ಕಾರಿ ಮತ್ತು ಅನುದಾನಿತ ಸಂಸ್ಥೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ನೌಕರರು ತಮ್ಮ ನೇಮಕಾತಿ ಪ್ರಾಧಿಕಾರದಿಂದ ಕಾರ್ಯಕ್ರಮದಲ್ಲಿ ಭಾಗವಹಿಸುವ ಬಗ್ಗೆ ಸ್ಪಷ್ಟವಾದ ಅನುಮತಿ ಪತ್ರ ಪಡೆದು ಮಾನ್ಯ ಜಿಲ್ಲಾಧಿಕಾರಿಗಳಿಂದ ಪತ್ರಕ್ಕೆ ಅನುಮೋದನೆ ಪಡೆದು ಆಯ್ಕೆ ಪ್ರಕ್ರಿಯೆ ನಡೆಯುವ ಸ್ಥಳದಲ್ಲಿ ನೀಡಲಾಗುವ ನಿಗದಿತ ಅರ್ಜಿಯನ್ನು ಭರ್ತಿ ಮಾಡಿ ಮೇಲೆ ತಿಳಿಸಿದ ದಾಖಲೆಗಳನ್ನು ಕಡ್ಡಾಯವಾಗಿ ಲಗತ್ತಿಸುವ ಮೂಲಕ ಆಯ್ಕೆ ಪ್ರಕ್ರಿಯೆಯಲ್ಲಿ ಭಾಗವಹಿಸಬಹುದಾಗಿದೆ. ಆಯ್ಕೆಯಾದ ಕಲಾವಿದರು 7 ದಿನಗಳ ಪೂರ್ವ ಸಿದ್ದತಾ ತರಬೇತಿ ಹಾಗೂ 7 ದಿನಗಳ ಪ್ರದರ್ಶನ ಅವಧಿಯಲ್ಲಿ ಯಾವುದೇ ಗೈರು ಹಾಜರಾತಿ ಇಲ್ಲದೇ ಭಾಗವಹಿಸುವುದು ಕಡ್ಡಾಯವಾಗಿರುತ್ತದೆ. ಕಲಾವಿದರ ಆಯ್ಕೆ ಸಮಿತಿಯ ಅಂತಿಮ ತಿರ್ಮಾನಕ್ಕೆ ಒಳಪಟ್ಟಿರುತ್ತದೆ ಎಂದು ತಿಳಿಸಿದ್ದಾರೆ.

## ಫೆ.15 ಜೆಸ್ಕಾಂ ಗ್ರಾಹಕರ ಸಂವಾದ ಸಭೆ

■ **ಹಂಪಿ ಟೈಮ್ಸ್ ಹೊಸಪೇಟೆ**

ಹೊಸಪೇಟೆ ಡ್ಯಾಂ ರಸ್ತೆ ನೆಹರು ಕಾಲೋನಿಯಲ್ಲಿರುವ ಜೆಸ್ಕಾಂ ಗ್ರಾಮೀಣ ಉಪವಿಭಾಗ ಕಚೇರಿಯಲ್ಲಿ ಫೆ.15 ರಂದು ಮಧ್ಯಾಹ್ನ 3 ಗಂಟೆಗೆ ಗ್ರಾಹಕರ ಕುಂದು ಕೊರತೆಗೆ ಸಂಬಂಧಿಸಿದ ಸಂವಾದ ಸಭೆ ನಡೆಯಲಿದೆ. ಸಾರ್ವಜನಿಕರು ಭಾಗವಹಿಸಿ ಸಮಸ್ಯೆ ಪರಿಹರಿಸಿಕೊಳ್ಳಲು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ದಯಾನಂದ ತಿಳಿಸಿದ್ದಾರೆ.

ಹಂಪಿ ಟೈಮ್ಸ್
ಕನ್ನಡ ಡಿಂಡಿಮ ಎಲ್ಲೆಡೆ
DIGITAL NEWS
NOW You can read
Kannada News in English, Hindi, Telugu, Marathi, Tamil, Malayalam, Arabic, Dutch, French, Italian, Portuguese & Russian, German Languages
www.hampitimes.com
HAMPI TIMES

## ಎಲ್ಲಾ ಗ್ರಾಮಗಳ ಅಭಿವೃದ್ಧಿಗೆ ಬದ್ಧ ಶಾಸಕ ನೇಮಿರಾಜ್ ನಾಯ್ಕ ಹೇಳಿಕೆ



■ **ಹಂಪಿ ಟೈಮ್ಸ್ ಕೊಟ್ಟೂರು**

ಈ ಊರಲ್ಲಿ ನನಗೆ ಮತಹಾಕಿದ್ದಾರೆ. ಆ ಊರಲ್ಲಿ ಮತಹಾಕಿಲ್ಲವೆಂದು ತಾರತಮ್ಯ ಮಾಡದೆ ಚುನಾವಣೆ ವೇಳೆ ಮಾತುಕೊಟ್ಟಂತೆ ಜಾತ್ಯಾತೀತವಾಗಿ ಹಾಗೂ ಪಕ್ಷತೀತವಾಗಿ ಎಲ್ಲಾ ಗ್ರಾಮಗಳ ಅಭಿವೃದ್ಧಿ ಕೈಗೊಳ್ಳುವೆ ಎಂದು ಶಾಸಕ ನೇಮಿರಾಜ್ ನಾಯ್ಕ ಹೇಳಿದರು.

ಹಗರಿಬೊಮ್ಮನಹಳ್ಳಿ ಕ್ಷೇತ್ರದ ದೂಪದಹಳ್ಳಿ, ತಿಮ್ಮಲಾಪುರ, ಕಂದಗಲ್ಲು, ಗಜಾಪುರ, ಮಲ್ಲನಾಯ್ಕನಹಳ್ಳಿ, ಲೋಟ್ಟನಕೆರೆ, ಮೋತಿಕಲ್ಲುತಾಂಡ ಸೇರಿದಂತೆ ವಿವಿದ ಗ್ರಾಮಗಳಲ್ಲಿ ಬುಧವಾರ ಕೆ.ಕೆ.ಆರ್.ಡಿ.ಬಿ ಹಾಗೂ ವಿವಿಧ ಅನುದಾನದಲ್ಲಿ 9.5 ಕೋಟಿ ರೂ.ಗಳ ಸಿ.ಸಿ. ರಸ್ತೆ ನಿರ್ಮಾಣ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದರು. ಕ್ಷೇತ್ರದ ಎಲ್ಲಾ ಮತದಾರರು ನಮ್ಮವರೇ, ಎಲ್ಲಾ ಗ್ರಾಮಗಳು ನಮ್ಮವೇ. ಎಲ್ಲಾ ಹಳ್ಳಿಗಳಿಗೂ ಸಮಾನವಾಗಿ ಅನುದಾನ ಬಿಡುಗಡೆ ಮಾಡುತ್ತೇನೆ ಎಂದರು.

ತಾ.ಪಂ ಜಿ.ಪಂ. ಚುನಾವಣೆ ಘೋಷಣೆಯಾಗಿಲ್ಲ. ನಾನು ಕೋರ್ ಕಮಿಟಿಯಲ್ಲಿದ್ದೇನೆ. ಚುನಾವಣೆ ಘೋಷಣೆಯಾದಾಗ, ಬಿಜೆಪಿ, ಜೆಡಿಎಸ್ ಪಕ್ಷದ ಮುಖಂಡರು ಸೇರಿ ತೀರ್ಮಾನ ಮಾಡುತ್ತೇವೆ. ಈ ಬಗ್ಗೆ ಈಗ ಪ್ರತಿಕ್ರಿಯೆ ವ್ಯಕ್ತಪಡಿಸುವುದಿಲ್ಲ. ಜನರು ಶಾಂತಿ ಸೌಹಾರ್ಧಯುತವಾಗಿ ಕೂಡಿಬಾಳಲಿ ಎಂದು ಹೇಳಿ, ಪ್ರಸ್ತುತ ಗ್ರಾಮಗಳ ಅಭಿವೃದ್ಧಿಗೆ ಮಾತ್ರ ಹೆಚ್ಚಿನ ಆದ್ಯತೆ ನೀಡುವೆ ಎಂದರು.

ತೇರು ಬಯಲಿನಲ್ಲಿ ಸಿ.ಸಿ. ರಸ್ತೆ ನಿರ್ಮಾಣ ಕುರಿತು ಅವಸರ ಮಾಡುವಂತ್ತಿಲ್ಲ. ರಥೋತ್ಸವದ ನಂತರ ಮತ್ತೊಮ್ಮೆ ಪಟ್ಟಣದಲ್ಲಿ ಸಭೆ ಸೇರಿ ಸಿ.ಸಿ. ರಸ್ತೆ ನಿರ್ಮಿಸುವುದರಿಂದಾಗುವ ಸಾಧಕ, ಬಾಧಕಗಳ ಕುರಿತು ಕುಲಂಕಷವಾಗಿ ಚರ್ಚೆ ಮಾಡಿ ಮುಂದಿನ ನಿರ್ಧಾರ ತೆಗೆದುಕೊಳ್ಳಲಾಗುವುದು ಎಂದರು.

ಈ ವೇಳೆ ಎಂ.ಎಂ.ಜೆ ಹರ್ಷವರ್ಧನ್, ಕಂದಗಲ್ಲು ನೀಲಕಂಠಪ್ಪ, ಬೂದಿ ಶಿವಕುಮಾರ್,ಎಂ.ಎಂ.ಜೆ. ಶೋಭಿತ್,ಅಟವಾಳಗಿ ಸಂತೋಷ್,ಜಿ.ಎಂ.ಮಲ್ಲಿಕಾರ್ಜುನಸ್ವಾಮಿ,ಕೊಟ್ರೇಶ್,ಪ್ರವೀಣ್ ಇನ್ನಿತರರಿದ್ದರು.

## ರಂಗೋಲಿ ಸ್ಪರ್ಧೆಗೆ ನೋಂದಾಯಿಸಿ

■ **ಹಂಪಿ ಟೈಮ್ಸ್ ಹೊಸಪೇಟೆ**

ವಿಶ್ವವಿಖ್ಯಾತ ಹಂಪಿ ಉತ್ಸವದಲ್ಲಿ ಫೆ.28 ರಂದು ಬೆ.6:30 ರಿಂದ 7: 30 ವರೆಗೆ ಹಂಪಿಯ ಶ್ರೀವಿರೂಪಾಕ್ಷ ದೇವಸ್ಥಾನದ ಎದುರಲ್ಲಿ ನಡೆಯುವ ರಂಗೋಲಿ ಸ್ಪರ್ಧೆಗೆ ಭಾಗವಹಿಸುವ ಅಭ್ಯರ್ಥಿಗಳು ಫೆ.25 ರೊಳಗೆ ತಮ್ಮ ಹೆಸರುಗಳನ್ನು ನೊಂದಾಯಿಸಬೇಕು. ಮೊದಲು ನೊಂದಾಯಿಸುವ 150 ಜನರಿಗೆ ಮಾತ್ರ ಭಾಗವಹಿಸಲು ಅವಕಾಶ ನೀಡಲಾಗುವುದು ಎಂದು ಹಂಪಿ ಉತ್ಸವ ಸಮಿತಿಯ ಗ್ರಾಮೀಣ ಕ್ರೀಡಾಕೂಟ ಮತ್ತು ರಂಗೋಲಿ ಸ್ಪರ್ಧೆಯ ನೋಡಲ್ ಅಧಿಕಾರಿ ಎಂ.ಉಮೇಶ್ ತಿಳಿಸಿದ್ದಾರೆ.

ಅಭ್ಯರ್ಥಿಗಳಿಗೆ ಪ್ರಥಮ, ದ್ವಿತೀಯ ಮತ್ತು ತೃತೀಯ ಬಹುಮಾನ ನೀಡಲಾಗುತ್ತದೆ. ಆಸಕ್ತ ಅಭ್ಯರ್ಥಿಗಳು ಆದಷ್ಟು ಬೇಗ ಹೆಸರನ್ನು ಆಧಾರ್ ಸಂಖ್ಯೆಯೊಂದಿಗೆ ತಾಲೂಕು ಪಂಚಾಯಿತಿ ಕಚೇರಿಯ ಸಹಾಯಕ ನಿರ್ದೇಶಕರು(ಪಂ.ರಾ) ಮತ್ತು ಕಚೇರಿ ವ್ಯವಸ್ಥಾಪಕರು, ತಾಲೂಕು ಪಂಚಾಯಿತಿ ಹೊಸಪೇಟೆ ಇವರಲ್ಲಿ ಹೆಸರನ್ನು ನೋಂದಾಯಿಸಿ ಕೊಳ್ಳಬೇಕು. ಹೆಚ್ಚಿನ ಮಾಹಿತಿಗಾಗಿ ಮೊ.8197745236, 9538505759 ಗೆ ಸಂಪರ್ಕಿಸಲು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## SSLC ಈ ಬಾರಿ ಫಲಿತಾಂಶ ನಮ್ಮದೆ ಹೈಸ್ಕೋರ್‌ಗೆ ಈಗಿಂದಲೇ ಪುನರ್‌ಮನನ ಮಾಡಿ

HAMPI TIMES MARGADARSHI

ಪರೀಕ್ಷೆಗೆ ನಾವು ಸಿದ್ಧ 36 ದಿನ

ಮನಸ್ಸು ಮಾಡು-ಕರ್ತವ್ಯ ನಿಷ್ಠನಾಗು-ಕಾದು ನೋಡು

https://epaper.hampitimes.com

ಹಂಪಿ ಟೈಮ್ಸ್ ಮಾರ್ಗದರ್ಶಿ SSLC : ಇಂಗ್ಲೀಷ್

### Degrees of Comparison

Definition: A grammatical devise that allow us to compare two or more nouns based on a quality is called Degrees of Comparison. The adjectives are used in degrees of comparison.

There are three types of degrees of comparison.
1. Positive degree : No other player is as great as Sachin.
2. Comparative degree: Sachin is greater than any other player.
3. Superlative degree: Sachin is the greatest player.

• Interchanging degrees

1. S.D : Gold is the costliest metal.
   C.D: Gold Is costlier than any other metal.
   P.D: No other metal is as costly as gold.

2. S.D: Mukesh is the richest person.
   C.D: Mukesh is richer than any other person.
   P.D: No other person is as rich as Mukesh.

3. P.D: No other state is as small as Goa.
   C.D: Goa is smaller than any other state.
   S.D: Goa is the smallest state.

### Articles

* 'A' 'An' and 'The' are articles.
* They are demonstrative adjectives.
* They are used before nouns.

### Kinds of articles

1. Definite article : used to refer to a perticular person or thing. Ex: the
2. Indefinite article: Does not refer to any perticular person or thing. Ex: a an

**Fill in the blank using the correct article:**
• Honesty is ___________ best policy.
• Paris is _____________ beautiful city.
• ___________ sun gives us heat and light.
• Rajesh is __________ NCC student.
• Scientific research is __________ exciting venture.
• We reached the city after___________ sunset.
• Suman bought _______ umbrella and _________ flask.
• Sudhir is _________MP and his wife is ______ homemaker.
• Shyam is learning to play __________sitar.
• Raveesh is ____ famous doctor.

**Practice the following.**
• He bought _____ new car.
• She is _______ prettiest girl in the school.
• I drank _______glass of milk
• My first apartment was on ___________ orange street.
• I spoke to her for__________ long time yesterday.
• Saraha is ____________ excellent teacher.

www.hampitimes.com - Hampi Times Margadarshi

### 'WH' Question words

**What are 'WH' questions ?**
A question in English introduced by a **wh-word** , that requires information in answer , rather than yes or no. Means you cannot answer these questions with only a Yes or No . You need to give some information in your response. **The WH – words are :** who , whose, whom , what , when , where , why , which, and how ,

**Now study the table below carefully**

| Question word | Ask about | Example |
|---|---|---|
| What | A thing | What is the colour of the sky ? |
| When | A time | When did Gandhi born ? |
| Where | A place | Where is my pen ? |
| Which | A reason | Why are you late today ? |
| Who | A choice | Which dish you like mostly ? |
| Who | A person | who is the worlds richest person ? |
| How | A manner | How do you go to school every day ? |

**Fill the correct WH questioning word and complete it .**
**QUIZ**
1. __________ did Columbus reached India?
2. _____ many apples are there in the basket ?
3. ___________is the largest cell in the world?
4. __________ your father name?
5. _________ were you absent yesterday?
6. ________ are you going now?
7. ___________ colour do you like?
8. _________ is our present Prime Minister?

**Practice Makes Man Perfect**

Prepared by : RB Gurubasavaraj Teacher. GHS Basarakodu. H.B.Halli Taluk. Vijayanagara Dist

ಶ್ರೀ ಜಗದ್ಗುರು ಕೊಟ್ಟೂರುಸ್ವಾಮಿ ಸಂಸ್ಥಾನಮಠ, ಹೊಸಪೇಟೆ

Grow Your Business With Us



S.M.Traders & Services
Authorised Distributor for ATLAS COPCO Portable Screw Air Compressors for North Karnataka
Water Well and Non Water Well Applications
web: www.smtradersandservices.com
M: 9686663125 - 9686663132
Atlas Copco
Head Office- Hospet, Vijayanagara district, Karnataka | Branch office 1- Ilkal, Bagalkot district, Karnataka | Branch office 2- Vijayapura, Karnataka

# ಭರತ ಹುಣ್ಣಿಮೆಗೆ ಉಚ್ಚಂಗಿದುರ್ಗದಲ್ಲಿ ಭಕ್ತಸಾಗರ

## ಉಚ್ಚೆಂಗೆಮ್ಮ ನಿನ್ನಾಲ್ಕು ಉಧೋ ಉಧೋ ಎಂದ ಭಕ್ತರು | ಬಂಡೆಗಲ್ಲಿನ ಮೇಲೆ ಸುಡು ಬಿಸಿಲಿನಲ್ಲೂ ಕುಗ್ಗದ ಭಕ್ತಿ

**ಹಂಪಿ ಟೈಮ್ಸ್ ಹರಪನಹಳ್ಳಿ**

ಭರತ ಹುಣ್ಣಿಮೆಯ ನಿಮಿತ್ತ ಭಕ್ತರು ಉಚ್ಚೆಂಗೆಮ್ಮ ನಿನ್ನಾಲ್ಕು ಉಧೋ ಉಧೋ ಎಂದು ದೇವಿಗೆ ಭಕ್ತಿಪೂರ್ವಕ ಘೋಷಣೆ ಮೊಳಗಿಸಿ ಹರಕೆ ತೀರಿಸಿದರು.

ತಾಲ್ಲೂಕಿನ ಇತಿಹಾಸ ಪ್ರಸಿದ್ಧ ಉಚ್ಚಂಗಿದುರ್ಗದ ಶ್ರೀ ಉಚ್ಚೆಂಗೆಮ್ಮ ದೇವಿಯ ದರ್ಶನಕ್ಕೆ ನಾಡಿನ ವಿವಿಧ ಜಿಲ್ಲೆಗಳಿಂದ ಹಾಗೂ ಹೊರ ರಾಜ್ಯಗಳಿಂದ ಭಕ್ತಾದಿಗಳು ಬುಧವಾರ ಆಗಮಿಸಿ ದರ್ಶನ ಪಡೆದು ದೇವಿಯ ದರ್ಶನ ಪಡೆದು ಪೂಜೆ ಸಲ್ಲಿಸಿದರು.

ಆನೆಹೊಂಡದ ಸುತ್ತಮುತ್ತಲಿನ ಪ್ರದೇಶದಲ್ಲಿ ಭಕ್ತರು ಹಳೆ ಪಡ್ಲಿಗಿಯನ್ನು ತೆಗೆದು ಹೊಸ ಪಡ್ಲಿಗಿ ಹಾಗೂ ಬಳೆಗಳನ್ನು ಇಟ್ಟು ಪೂಜೆ ನೆರವೇರಿಸಿದರು.

ದುಷ್ಟ ಸಂಹಾರಕ್ಕೆ ತೆರಳಿದ್ದ ಉಚ್ಚಂಗೆಮ್ಮ ದೇವಿಯು ವಿಜಯದೊಂದಿಗೆ ಮರಳುತ್ತಾಳೆ ಎನ್ನುವ ನಂಬಿಕೆಯಿಂದ ಹುಣ್ಣಿಮೆ ಮುನ್ನಾ ದಿನ ಕೋಟೆಗೆ ಸಾವಿರಾರು ಪುನರ್ವಸತಿ ಕಲ್ಪಿತ ದೇವದಾಸಿಯರು, ಜೋಗಪ್ಪ ಅವರು ಬೆಟ್ಟದ ಮೇಲೆ ನಿಗದಿತ ಸ್ಥಳದಲ್ಲಿ ಸ್ನಾನ ಮಾಡಿ, ತಾವು ಬಳಸುತ್ತಿದ್ದ ಹಳೆಯ ಪಡ್ಲಗಿ, ಹಸಿರು ಬಳೆ, ಬಿಳಿ, ಕೆಂಪು ಮುತ್ತುಗಳಿರುವ ಸರ, ಸೀರೆಗಳನ್ನು ಕೋಟೆಯ ಆವರಣದಲ್ಲಿ ಬಿಟ್ಟು, ಹೊಸ ಬಟ್ಟೆ, ಸಾಮಗ್ರಿ ಧರಿಸುವ ಮೂಲಕ ಹೊಸ ಪಡ್ಲಗಿ ತುಂಬಿಸಿ ಮುತ್ತೈದೆತನ ಪಡೆಯುವ ಸಂಪ್ರದಾಯ ಆಚರಿಸುತ್ತಿದ್ದ ದೃಶ್ಯಗಳು ಗಮನ ಸೆಳೆದವು.



ಹರಕೆ ಹೊತ್ತಿದ್ದ ಸಾವಿರಾರು ಭಕ್ತರು ಕೆಂಡದಂತೆ ಕಾದಿದ್ದ ಬಂಡೆಗಳನ್ನು ಲೆಕ್ಕಿಸದೇ ಬರಿಗಾಲಿನಲ್ಲಿ ದೇವಿ ಸನ್ನಿಧಿಗೆ ತೆರಳಿ ಹೂವು, ಹಣ್ಣು, ಕಾಯಿ ಸಮರ್ಪಿಸಿದರು. ಕೆಲವರು ಬಾಳೆ ಹಣ್ಣುಗಳನ್ನು ಮುಖ್ಯದ್ವಾರ, ದೇವಸ್ಥಾನ ಹಿಂಭಾಗದ ಗೋಡೆಗೆ ತಿಕ್ಕಿ ಭಕ್ತಿ ಸಲ್ಲಿಸುತ್ತಿದ್ದರು.

ನಮ್ಮ ಹಿರಿಯರು ಭರತ ಹುಣ್ಣಿಮೆ ದಿನ ಉಚ್ಚಂಗೆಮ್ಮ ದೇವಿ ದರ್ಶನ ಪಡೆದು, ಸಾಮಗ್ರಿ ಅರ್ಪಿಸುತ್ತಿದ್ದರು. ಹೀಗೆ ಮಾಡುವುದರಿಂದ ಮುತ್ತೈದೆತನ ಹಾಗೂ ಸುಖ, ಶಾಂತಿ ನೆಮ್ಮದಿ ಅನುಗ್ರಹಿಸುತ್ತದೆ' ಹಾಗಾಗಿ ನಾವು ದೇವಿಯ ದರ್ಶನ ಪಡೆದು ಪುನೀತರಾದೆವು ಎಂದು ಹರಪನಹಳ್ಳಿ ಪಟ್ಟಣದ ನಿವಾಸಿಗಳಾದ ಭಂಗಿ ಧನಲಕ್ಷ್ಮೀ, ವಿದ್ಯಾಶ್ರೀ ಮಾಳ್ಗಿ, ಸೂಚನ ಪೂಜಾರ್, ದುರುಗಮ್ಮ, ಲೋಲಾಕ್ಷೀ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.

ಅರಿಶಿನ ಹೊಂಡ, ಆನೆ ಹೊಂಡಗಳಿಗೆ ಇಳಿಯದಂತೆ ತಂತಿ ಬೇಲಿ ಹಾಕಿದ್ದ ಕಾರಣ ಕೃತಕ ಸ್ನಾನಗೃಹಗಳಲ್ಲಿ ಸ್ನಾನ ಮಾಡುತ್ತಿದ್ದ ಭಕ್ತರು ಸ್ಥಳದಲ್ಲಿಯೇ ಬಟ್ಟೆಗಳನ್ನು ಬೀಸಾಡಿದ್ದರು. ಕೆಲವೆಡೆ ಪಡ್ಲಗಿಗಳ ರಾಶಿಯೇ ಕಂಡುಬಂತು. ದೇವದಾಸಿ ಬಿಡುವ ಆಚರಣೆ ಮಾಡದಂತೆ ಅಲ್ಲಲ್ಲಿ ಧ್ವನಿವರ್ಧಕ, ಸಿ.ಸಿ.ಟಿ.ವಿ. ಕ್ಯಾಮೆರಾಗಳ ಕಣ್ಗಾವಲು, ಪೊಲೀಸ್ ಬಂದೋಬಸ್ತ್ ಒದಗಿಸಲಾಗಿತ್ತು. ಜಡಿ ಕತ್ತರಿಸಲು ಪ್ರತ್ಯೇಕ ವ್ಯವಸ್ಥೆ ಮಾಡಲಾಗಿತ್ತು.

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ದೇವದಾಸಿ ಮಹಿಳೆಯರ ಪುನರ್ವಸತಿ ಯೋಜನೆ, ಕಂದಾಯ ಇಲಾಖೆ, ಹಿಂದೂ ಧಾರ್ಮಿಕ ದತ್ತಿ ಇಲಾಖೆ, ಪೊಲೀಸ್ ಇಲಾಖೆ, ಕಂದಾಯ ಇಲಾಖೆ, ಅಂಗನವಾಡಿ ಕಾರ್ಯಕರ್ತೆಯರು, ಆಶಾ ಕಾರ್ಯಕರ್ತೆಯರ ತಂಡ ಅಲ್ಲಲ್ಲಿ ಜಾಗೃತಿ ಮೂಡಿಸುತ್ತಿದ್ದರು.

ಭಕ್ತರಿಗೆ ತೊಂದರೆ ಆಗದಂತೆ ಗ್ರಾಮದ ಹೊರವಲಯ ದಲ್ಲಿ ದಾವಣಗೆರೆ ಹಾಗೂ ಹರಪನಹಳ್ಳಿ ಡಿಪೋದಿಂದ ಸಾರಿಗೆ ವ್ಯವಸ್ಥೆ,ಕುಡಿಯುವ ನೀರಿನ ವ್ಯವಸ್ಥೆ, ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸಿ, ಸುಗಮ ಸಂಚಾರಕ್ಕೆ ಅನುವು ಮಾಡಿ ಕೊಡಲಾಗಿತ್ತು.

ಹಿಂದೂ ಧಾರ್ಮಿಕ ದತ್ತಿ ಇಲಾಖೆ ಅಧಿಕಾರಿ ಮಲ್ಲಪ್ಪ, ಸಿಬ್ಬಂದಿ ಹಿರೇಮೇಗಳಗೇರಿ ಗಂಗಾಧರ, ಡಿವೈಎಸ್ಪಿ ವೆಂಕಟಪ್ಪ ನಾಯಕ, ಸಿಪಿಐ ನಾಗರಾಜ್ ಎಂ.ಕಮ್ಮಾರ, ಸಿಡಿಪಿಓ ಅಶೋಕ ದೇವಸ್ಥಾನ ಸಮಿತಿ ಪದಾಧಿಕಾರಿಗಳಿದ್ದರು.

YOU CAN RESERVE MEDIA SPACE FOR YOUR PROGRAM PROMOTION
Scan to Read Hampi Times Epaper
Contact for More Details
9448633038
www.hampitimes.com/epaper.hampitimes.com

# ಮುಖ್ಯ ವೇದಿಕೆಗೆ ಎಂ.ಪಿ.ಪ್ರಕಾಶ ಹೆಸರು

ಮೊದಲ ಪುಟದಿಂದ

ಸಾರ್ವಜನಿಕರು ಕಣ್ತುಂಬಿಕೊಳ್ಳಬಹುದು. ಇದರೊಂದಿಗೆ ಶ್ವಾನ, ಕುರಿ ಪ್ರದರ್ಶನ ಸ್ಪರ್ಧೆ, ಕುಸ್ತಿ ಪಂದ್ಯಾವಳಿಗಳು ನಡೆಯಲಿವೆ. ಮಾತಂಗ ಪರ್ವತ ಮೈದಾನದಲ್ಲಿ ವಸ್ತು ಪ್ರದರ್ಶನ ಮಳಿಗೆಗಳನ್ನು ತೆರೆಯಲಾಗುವುದು. ಇಲ್ಲಿ ಕೃಷಿ ಹಾಗೂ ತೋಟಗಾರಿಕೆ ಇಲಾಖೆಗಳಿಂದ ವಿಶೇಷ ಪ್ರದರ್ಶನ ಏರ್ಪಡಿಸಲಾಗುತ್ತದೆ. ಈ ಬಾರಿ ವಿಜಯ ವಿಠಲ ಮಂದಿರದ ಆವರಣದಲ್ಲಿ ಉತ್ಸವ ಎರಡನೇ ದಿನ ಮುಂಜಾನೆ ಸಾಮೂಹಿಕ ಯೋಗಾಭ್ಯಾಸ ಆಯೋಜನೆ ಚಿಂತನೆ ನಡೆಸಲಾಗಿದೆ. ಹಂಪಿ ಉತ್ಸವದ ಕುರಿತು ಪ್ರಚಾರ ನಡೆಸುವ ದೃಷ್ಟಿಯಿಂದ ಹವ್ಯಾಸಿ ಬೈಕ್ ರೈಡರ್ ತಂಡವೊಂದು ಬೆಂಗಳೂರಿನಿಂದ ಹಂಪಿವರೆಗೆ ಬೈಕ್ ರ್ಯಾಲಿ ನಡೆಸಲಿದೆ ಎಂದು ಮಾಹಿತಿ ನೀಡಿದರು.

**4 ಲಕ್ಷ ಜನ ಪಾಲ್ಗೊಳ್ಳುವ ನಿರೀಕ್ಷೆ : 100 ಎಕರೆ ಜಾಗದಲ್ಲಿ ಪಾರ್ಕಿಂಗ್ ವ್ಯವಸ್ಥೆ**

ಈ ಬಾರಿಯ ಹಂಪಿ ಉತ್ಸವದಲ್ಲಿ ಸುಮಾರು 4 ಲಕ್ಷ ಜನ ಪಾಲ್ಗೊಳ್ಳಲುವ ನಿರೀಕ್ಷೆಯಿದೆ. ಪ್ರಧಾನ ವೇದಿಕೆ ಹಾಗೂ ಸಮಾನಾಂತರ ವೇದಿಕೆಗಳಿಗೆ ಹತ್ತಿರದ 100 ಎಕರೆ ಜಾಗದಲ್ಲಿ ವಾಹನಗಳ ಪಾರ್ಕಿಂಗ್ ವ್ಯವಸ್ಥೆ ಮಾಡಲಾಗಿದೆ. ಸ್ಥಳೀಯ ರೈತರು ಸಂತಸದಿಂದ ಪಾರ್ಕಿಂಗ್ ಗೆ ಜಮೀನು ನೀಡಿದ್ದಾರೆ. ಉತ್ಸವಕ್ಕೆ ಆಗಮಿಸುವ ಜನರಿಗೆ ಉಚಿತ ಸಾರಿಗೆ ವ್ಯವಸ್ಥೆ ಕಲ್ಪಿಸಲಾಗಿದೆ.ಮೊದಲ ದಿನ ಸಾರ್ವಜನಿಕ ಉತ್ಸವಕ್ಕೆ ಆಗಮಿಸಲು ಅನುಕೂಲವಾಗುವಂತೆ ಜಿಲ್ಲೆಯ ಎಲ್ಲಾ ಗ್ರಾಮಗಳಿಂದ ಸುಮಾರು 250 ಬಸ್‌ಗಳ ವ್ಯವಸ್ಥೆ ಮಾಡಲಾಗಿದೆ. ಇದರೊಂದಿಗೆ ಉತ್ಸವ ನಡೆಯುವ ಮೂರು ದಿನಗಳ ಕಾಲ ಹೊಸಪೇಟೆ ನಗರದ ಬಸ್ ನಿಲ್ದಾಣದಿಂದ 40 ಬಸ್‌ಗಳು ಹಂಪಿಗೆ ಸರಿತಿ ಆಧಾರದಲ್ಲಿ ಕಾರ್ಯಾಚರಣೆ ನಡೆಸುತ್ತವೆ ಎಂದರು.

**ರೂ.20 ಕೋಟಿ ಅನುದಾನಕ್ಕೆ ಬೇಡಿಕೆ:**

ಹಂಪಿ ಉತ್ಸವ ಉದ್ಘಾಟನೆ ಕಾರ್ಯಕ್ರಮಕ್ಕೆ ಮುಖ್ಯಮಂತ್ರಿ ಸಿದ್ಧರಾಮಯ್ಯನವರು ಆಗಮಿಸಲಿದ್ದಾರೆ. ವಸತಿ, ಅಲ್ಪಸಂಖ್ಯಾತ, ವಕ್ಫ್ ಹಾಗೂ ಜಿಲ್ಲಾ ಉಸ್ತವಾರಿ ಸಚಿವ ಝಡ್.ಬಿ.ಜಮೀರ್ ಅಹಮದ್ ಖಾನ್ ಸೇರಿದಂತೆ ಹಲವು ಸಚಿವರು, ಜಿಲ್ಲೆಯ ಎಲ್ಲ ಜನಪ್ರತಿನಿಧಿಗಳು ಪಾಲ್ಗೊಳ್ಳುವರು. ಇಂಡಿಯಾ ಗಾಟ್ ಟ್ಯಾಲೆಂಟ್ ಟಿವಿ ಕಾರ್ಯಕ್ರಮದಲ್ಲಿ ಪ್ರಖ್ಯಾತರಾದ ಕಲಾವಿದರನ್ನು ಉತ್ಸವಕ್ಕೆ ಕರೆ ತರಲು ಮಾತುಕತೆ ನಡೆಸಲಾಗುತ್ತದೆ. ನಾಡಿನ ಹೆಸರಾಂತ ಕಲಾವಿದರು, ಚಿತ್ರನಟರನ್ನು ಸಹ ಉತ್ಸವಕ್ಕೆ ಆಹ್ವಾನಿಸಲಾಗುವುದು. ಉತ್ಸವ ಆಯೋಜನೆಗೆ ರೂ.20 ಕೋಟಿ ಅನುದಾನ ಬಿಡುಗಡೆಗೆ ಸರ್ಕಾರಕ್ಕೆ ಮನವಿ ಮಾಡಲಾಗಿದೆ ಎಂದರು.

ಕಳೆದ ಬಾರಿ ಉತ್ಸವದಲ್ಲಿ ಪಾಲ್ಗೊಂಡ ಎಲ್ಲ ಕಲಾವಿದರ ಗೌರವ ಧನವನ್ನು ಮಾರ್ಚ್ ತಿಂಗಳ ಒಳಗೆ ಅವರ ಖಾತೆಗೆ ನೇರವಾಗಿ ಜಮೆ ಮಾಡಲಾಗಿದೆ. ಪ್ರಧಾನ ವೇದಿಕೆ ವಿನ್ಯಾಸವನ್ನು ಜಿಲ್ಲಾ ಉಸ್ತುವಾರಿ ಸಚಿವರೊಂದಿಗೆ ಚರ್ಚಿಸಿ ಅಂತಿಮ ಗೊಳಿಸಲಾಗುವುದು. ಪ್ರದರ್ಶನ ಮಳಿಗೆಗಳ ಬಾಡಿಗೆಯನ್ನು ರೂ.3000 ಅಂತಿಮಗೊಳಿಸುವುದಾಗಿ ಪ್ರಶ್ನೆಗೆ ಉತ್ತರಿಸಿದರು.

# ಆರೋಗ್ಯವಂತ ಯುವಜನತೆ ದೇಶದ ನೈಜ ಸಂಪತ್ತು

## ಅಶೋಕ್ ಭೀಮನಾಯ್ಕ ಅಭಿಮತ | ಜಯಪ್ರಕಾಶ್ ಮಿ.ರಾಕ್ ಪಿಟ್ನೆಸ್, ಹುಲಿಗಿ ರವಿಚಂದ್ರ ಮೋಸ್ಟ್ ಮಸ್ಕುಲರ್




**ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**

ಶಿಕ್ಷಣ ಮತ್ತು ಕ್ರೀಡೆಯಲ್ಲಿ ಯುವಜನರ ಉತ್ತಮ ಸಾಧನೆಗೆ ಅಗತ್ಯ ನೆರವು ಒದಗಿಸಲಾಗುವುದು ಎಂದು ಜಿಲ್ಲಾ ಯುವ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಅಶೋಕ್ ಭೀಮನಾಯ್ಕ ಅಭಿಪ್ರಾಯಪಟ್ಟರು.

ಪಟ್ಟಣದಲ್ಲಿ ರಾಕ್ ಪಿಟ್ನೆಸ್ ಸಂಸ್ಥೆಯಿಂದ ನಡೆದ ಅಂತರ್ ಜಿಲ್ಲಾ ಮಟ್ಟದ ದೇಹ ದಾರ್ಢ್ಯ ಸ್ಪರ್ಧೆಗೆ ಚಾಲನೆ ನೀಡಿ ಇತ್ತೀಚೆಗೆ ಮಾತನಾಡಿದರು. ದೇಹದಾರ್ಢ್ಯ ಸ್ಪರ್ಧಿಗಳು ಯುವಜನತೆಗೆ ಮಾದರಿಯಾಗಿದ್ದಾರೆ. ಸ್ಪರ್ಧೆಯನ್ನು ಆಯೋಜಿಸುವ ಮೂಲಕ ಇಂತಿಯಾಜ್ ಒಂದು ಮಾದರಿ ಕಾರ್ಯ ನಿರ್ವಹಿಸಿದ್ದಾರೆ. ಆರೋಗ್ಯವಂತ ಯುವಜನತೆ ದೇಶದ ನೈಜ ಸಂಪತ್ತು. ನನ್ನ ಮೇಲೆ ಭರವಸೆ ಇರಿಸಿ ಜಿಲ್ಲಾಧ್ಯಕ್ಷ ಸ್ಥಾನಕ್ಕೆ ಆಯ್ಕೆ ಮಾಡಿದ ಯುವಜನರ ಸೇವೆಯ ಮೂಲಕ ಸಾರ್ಥಕತೆ ಕಾಣುವೆ ಎಂದರು.

ಆಯೋಜಕ ಬಿ.ಇಂತಿಯಾಜ್ ಮಾತನಾಡಿ, ಜಿಲ್ಲೆಯಲ್ಲಿ ಹೆಚ್ಚಿನ ಪ್ರಮಾಣದ ದೇಹದಾರ್ಢ್ಯ ಪಟುಗಳು ರಾಷ್ಟ್ರಮಟ್ಟದಲ್ಲಿಯೂ ಉತ್ತಮ ಸಾಧನೆ ಮಾಡುತ್ತಿರುವುದು ಪ್ರೇರಣೆಯಾಗಿದೆ ಎಂದರು.

ಪುರಸಭೆ ಅಧ್ಯಕ್ಷ ಎಂ.ಮರಿರಾಮಣ್ಣ, ಸದಸ್ಯ ಪವಾಡಿ ಹನುಮಂತಪ್ಪ ಮಾತನಾಡಿದರು. ಸಹಕಾರಿ ಸಂಘದ ಅಧ್ಯಕ್ಷ ದಾದಮ್ಮನವರ ಬಸವರಾಜ ಮುಖಂಡರಾದ ಡಿಶ್ ಮಂಜುನಾಥ, ಕಾಂಗ್ರೆಸ್ ಯುವ ಮುಖಂಡ ಪೆಂಟರ್ ಬಾಬು, ಈ.ಭರತ್, ಜಿ.ಹನುಮಂತಪ್ಪ, ಸೆರೆಗಾರ ಹುಚ್ಚಪ್ಪ, ಗುರುಬಸವರಾಜ ಸೊನ್ನದ್, ತುರಾಯಿನಾಯ್ಕ, ಶಾಬುದ್ದೀನ್, ರಾಕ್ ಪಿಟ್ನೆಸ್‌ನ ಯುನಿಸ್‌ಖಾನ್, ಅಜರುದ್ದೀನ್, ಸಲೀಂ, ಗಂಗಾಧರ ಇದ್ದರು. ಬಿ.ಇಂತಿಯಾಜ್, ಹುಲ್ಮನಿ ಪೀರುಸಾಹೇಬ್, ಈ.ಭರತ್ ನಿರ್ವಹಿಸಿದರು.

**ಬಹುಮಾನ ವಿತರಣೆ:** ಸ್ಪರ್ಧೆಯಲ್ಲಿ ಮಿ. ರಾಕ್‌ಪಿಟ್ನೆಸ್ ಆಗಿ ದಾವಣಗೆರೆಯ ಜಯಪ್ರಕಾಶ್ ವಿಜೇತರಾಗಿ, 20ಸಾವಿರ ರೂ. ಬಹುಮಾನ, ಆಕರ್ಷಕ ಟ್ರೋಫಿ ಗಳಿಸಿದರು. ಮಿ. ಮೋಸ್ಟ್ ಮಸ್ಕುಲರ್ ಆಗಿ ಹುಲಿಗಿಯ ರವಿಚಂದ್ರನ್ ವಿಜೇತರಾಗಿ 15 ಸಾವಿರ ರೂ. ಬಹುಮಾನ ಟ್ರೋಫಿ, ಮಿ.ಬೆಸ್ಟ್ ಪೋಸರ್ ಆಗಿ ದಾವಣಗೆರೆಯ ಭರತ್ ಇವರು 10ಸಾವಿರ ರೂ.ಬಹುಮಾನ ಟ್ರೋಫಿ ಪಡೆದರು. ವಿಜಯನಗರ, ದಾವಣಗೆರೆ, ಕೊಪ್ಪಳ ಸೇರಿ ನಾನಾ ಜಿಲ್ಲೆಗಳ ಒಟ್ಟು 18 ಕ್ಕೂ ಹೆಚ್ಚು ದೇಹದಾರ್ಢ್ಯ ಪಟುಗಳು ಉತ್ತಮ ಪ್ರದರ್ಶನ ನೀಡಿ ಗಮನ ಸೆಳೆದರು. ಇದೇವೇಳೆ ಅಶೋಕ್ ಭೀಮನಾಯ್ಕ ಮತ್ತು ಬಿ.ಇಂತಿಯಾಜ್ ಇವರನ್ನು ಸನ್ಮಾನಿಸಲಾಯಿತು.

# ವೀರಶೈವ ಸಮುದಾಯ ಭವನ ನಿರ್ಮಾಣಕ್ಕೆ ನಿವೇಶನ ನೀಡಿ

## ಶಾಸಕ ಡಾ. ಶ್ರೀನಿವಾಸ್ ಎನ್.ಟಿ. ಅವರಿಗೆ ಮನವಿ



**ಹಂಪಿ ಟೈಮ್ಸ್ ಕೂಡ್ಲಿಗಿ**

ಪಟ್ಟಣದಲ್ಲಿ ಅಖಿಲ ಭಾರತ ವೀರಶೈವ ಮಹಾಸಭಾದ ಸಮುದಾಯ ನಿರ್ಮಾಣ ಮಾಡಲು ನಿವೇಶನ ನೀಡಬೇಕು ಹಾಗೂ ವೀರಶೈವ ರುದ್ರಭೂಮಿ ನಿಗದಿಪಡಿಸಿ ಸೌಲಭ್ಯ ಒದಗಿಸಬೇಕು ಎಂದು ಒತ್ತಾಯಿಸಿ ಅಖಿಲ ಭಾರತ ವೀರಶೈವ ಮಹಾಸಭಾದ ಪದಾಧಿಕಾರಿಗಳು ಬುಧವಾರ ಶಾಸಕ ಡಾ. ಶ್ರೀನಿವಾಸ್ ಎನ್.ಟಿ. ಅವರಿಗೆ ಮನವಿ ಪತ್ರ ಸಲ್ಲಿಸಿದರು.

ಈ ಸಂದರ್ಭದಲ್ಲಿ ವೀರಶೈವ ಮಹಾಸಭಾದ ತಾಲ್ಲೂಕು ಅಧ್ಯಕ್ಷ ಕೆ. ಸುನಿಲ್ ಗೌಡ್ರು ಮಾತನಾಡಿ, ತಾಲ್ಲೂಕಿನಲ್ಲಿ ವೀರಶೈವ ಲಿಂಗಾಯತ ಜನಾಂಗವು ಸಾಕಷ್ಟಿದ್ದು, ಅವರಿಗೆ ಉಪಯೋಗವಾಗುವಂತೆ ಸಮುದಾಯ ಭವನ ನಿರ್ಮಾಣ ಮಾಡಬೇಕಾಗಿದೆ. ಅದ್ದರಿಂದ ಪಟ್ಟಣದ ಎರಡನೇ ವಾರ್ಡಿನಲ್ಲಿ ಇರುವ ಲೇಔಟನಲ್ಲಿನ ಸಿಎ ನಿವೇಶನವನ್ನು ಮಹಾಸಭಾಕ್ಕೆ ಮಂಜೂರು ಮಾಡಬೇಕು ಹಾಗೂ ಪಟ್ಟಣದಲ್ಲಿನ ವೀರಶೈವ ರುದ್ರಭೂಮಿಯಲ್ಲಿ ಅನೇಕ ಸಮಸ್ಯೆಗಳಿದ್ದು, ಅವುಗಳನ್ನು ನಿವಾರಣೆ ಮಾಡಿ, ಅಭಿವೃದ್ಧಿ ಪಡಿಸಿ ಅನುಕೂಲ ಮಾಡಿಕೊಡಬೇಕು ಎಂದು ಶಾಸಕರಿಗೆ ಮನವಿ ಮಾಡಿದರು.

ಮಹಾಸಭಾದ ತಾಲ್ಲೂಕು ಪ್ರಧಾನ ಕಾರ್ಯದರ್ಶಿ ಎಸ್.ಎಸ್. ಗಿರೀಶ್, ಜಿಲ್ಲಾ ಪ್ರತಿನಿಧಿಗಳಾದ ಗುರುಸಿದ್ದನಗೌಡ, ಕೆ. ನಾಗರಾಜ, ಕೋಗಳಿ ಮಂಜುನಾಥ, ಪಿ. ಶಿವರಾಜ್, ನಾಗರಾಜ ಕೊಟ್ರಪ್ಪಗಳ, ಕೆ.ಎಸ್. ವೀರೇಶ್, ಮಂಜುನಾಥ, ಸೋಮನಗೌಡ ಪಾಲ್ಗೊಂಡಿದ್ದರು.

# ಹಂಪಿ ಉತ್ಸವದಲ್ಲಿ ಪುಸ್ತಕ ಪ್ರದರ್ಶನ–ಮಾರಾಟ ಮಳಿಗೆ ನೊಂದಾಯಿಸಲು ಅವಕಾಶ

**ಹಂಪಿ ಟೈಮ್ಸ್ ಹೊಸಪೇಟೆ**

ಹಂಪಿ ಉತ್ಸವ 2025 ರಲ್ಲಿ ಪುಸ್ತಕ ಪ್ರದರ್ಶನ ಹಾಗೂ ಮಾರಾಟ ಮಾಡುವ ಆಸಕ್ತ ಪ್ರಕಾಶಕರು ಫೆ.17 ರೊಳಗೆ ಠೇವಣಿಯನ್ನು ಪಾವತಿಸಿ ತಮ್ಮ ಹೆಸರನ್ನು ನೊಂದಾಯಿಸಬೇಕೆಂದು ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ಉಪನಿರ್ದೇಶಕರಾದ ಟಿ.ಫಾಲಾಕ್ಷ ತಿಳಿಸಿದ್ದಾರೆ.

ಕನ್ನಡ ಸಾಹಿತ್ಯ, ಸಂಸ್ಕೃತಿ, ಇತಿಹಾಸ, ಆರ್ಥಿಕ, ಸಾಮಾಜಿಕ, ವೈಜ್ಞಾನಿಕ, ಸಂಶೋಧನೆ, ಜನಪದ ಸಾಹಿತ್ಯ, ಪ್ರವಾಸ, ಹವ್ಯಾಸ ಮುಂತಾದ ಪ್ರಕಾರಗಳ ಪುಸ್ತಕಗಳನ್ನು ಪ್ರದರ್ಶನ ಮತ್ತು ಮಾರಾಟ ಮಾಡಬಹುದು. ಯಾವುದೇ ಕಾರಣಕ್ಕೂ ಕೆಟ್ಟ ಅಭಿರುಚಿಯನ್ನು ಬೆಳೆಸುವ, ಜನರ ಮಧ್ಯೆ ವಿರಸ ಮೂಡಿಸುವ, ದೇಶದ ಐಕ್ಯತೆ ಹಾಗೂ ಸಾಮರಸ್ಯಕ್ಕೆ ಧಕ್ಕೆ ತರುವ ಹಾಗೂ ನಿಷೇಧಿತ ಪುಸ್ತಕಗಳನ್ನು ಪ್ರದರ್ಶಿಸಿ ಮಾರಾಟ ಮಾಡುವಂತಿಲ್ಲ. ದೇಶದ ಕಾನೂನು ಬದ್ಧವಾಗಿ ಪ್ರಕಟವಾಗಿರುವ ಪುಸ್ತಕಗಳನ್ನು ಮಾತ್ರ ಪ್ರದರ್ಶನಕ್ಕಿಟ್ಟು ಮಾರಾಟ ಮಾಡಬಹುದು. ಪ್ರತಿ ಪುಸ್ತಕ ಮಳಿಗೆಗೆ ಒಂದು ಶಾಮಿಯಾನ ಎರಡು ಮೇಜುಗಳನ್ನು ಒದಗಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ಹಾಗೂ ನೋಂದಾಣಿಗಾಗಿ ಜಿಲ್ಲಾ ಗ್ರಂಥಾಲಯ ಅಧಿಕಾರಿಗಳು, ವಿಜಯನಗರ ಜಿಲ್ಲೆ, ಮೊ.7795328559, ನಗರ ಕೇಂದ್ರ ಗ್ರಂಥಾಲಯ ಹೊಸಪೇಟೆಯ ಶಿಲ್ಪಶ್ರೀ ಮೊ.9480609735, ಬಳ್ಳಾರಿ ಮತ್ತು ವಿಜಯನಗರ ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕರಾದ ಫಾಲಾಕ್ಷ.ಟಿ. ಮೊ.8861128848, 8310969813 ಹಾಗೂ ಚಿತ್ತವಾಡ್ಗಿಯ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯರು ಹಾಗೂ ನೋಡಲ್ ಅಧಿಕಾರಿಗಳಾದ ನಾಗರಾಜ್ ಹವಾಲ್ದಾರ್ ಮೊ.8197123522 ಸಂಖ್ಯೆಗೆ ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಅಂಗನವಾಡಿ ನೇಮಕಾತಿ ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟ – ಆಕ್ಷೇಪಣೆಗೆ ಅವಕಾಶ

**ಹಂಪಿ ಟೈಮ್ಸ್ ಹೊಸಪೇಟೆ**

ಹೂವಿನಹಡಗಲಿ ತಾಲೂಕಿನ ವ್ಯಾಪ್ತಿಯ ಶಿಶು ಅಭಿವೃದ್ಧಿ ಯೋಜನೆಯಡಿಯಲ್ಲಿ 12 ಅಂಗನವಾಡಿ ಕಾರ್ಯಕರ್ತೆ ಮತ್ತು 44 ಅಂಗನವಾಡಿ ಸಹಾಯಕಿಯರ ನೇಮಕಾತಿಗೆ ಸಂಬಂಧಿಸಿದಂತೆ ಜಿಲ್ಲಾ ಆಯ್ಕೆ ಸಮಿತಿಯಿಂದ ತಾತ್ಕಾಲಿಕ ಆಯ್ಕೆ ಪ್ರಕಟಿಸಿದ್ದು, ಆಯಾ ಅಂಗನವಾಡಿ ಕೇಂದ್ರಗಳಲ್ಲಿ, ಗ್ರಾಪಂ ಕಚೇರಿಗಳಲ್ಲಿ ಹಾಗೂ ಕಚೇರಿ ಸೂಚನಾ ಫಲಕದಲ್ಲಿ ಅಭ್ಯರ್ಥಿಗಳ ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟಿಸಲಾಗಿದೆ. ಆಯ್ಕೆಗೆ ಸಂಬಂಧಿಸಿದಂತೆ ಆಕ್ಷೇಪಣೆಗಳಿದ್ದಲ್ಲಿ ಫೆ.15 ರೊಳಗಾಗಿ ಪೂರಕ ದಾಖಲಾತಿಗಳೊಂದಿಗೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಾರ್ಯಾಲಯ, ಹೂವಿನಹಡಗಲಿ ಇವರನ್ನು ಸಂಪರ್ಕಿಸಬಹುದು ಎಂದು ಶಿಶು ಅಭಿವೃದ್ಧಿ ಯೋಜನಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಪ್ರವಾಸೋದ್ಯಮ ಇಲಾಖೆ: ಅರ್ಜಿ ಸಲ್ಲಿಕೆ ಅವಧಿ ವಿಸ್ತರಣೆ

**ಹಂಪಿ ಟೈಮ್ಸ್ ಬಳ್ಳಾರಿ**

ಪ್ರವಾಸೋದ್ಯಮ ಇಲಾಖೆ ವತಿಯಿಂದ 2024–25ನೇ ಸಾಲಿನಲ್ಲಿ ಎಸ್‌ಸಿಎಸ್‌ಪಿ ಮತ್ತು ಟಿಎಸ್‌ಪಿ ಯೋಜನೆಯಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಣ್ಣ ಉದ್ಯಮಿದಾರ ರನ್ನು ಉತ್ತೇಜಿಸಲು ಒಂದು ತಿಂಗಳ ಉದ್ಯಮಶೀಲತೆ ತರಬೇತಿ ಹಾಗೂ ತರಬೇತಿ ಪಡೆದ ಅಭ್ಯರ್ಥಿಗಳಿಗೆ ಮೊಬೈಲ್ ಕ್ಯಾಂಟಿನ್ ನಡೆಸಲು ಸಹಾಯಧನ ನೀಡಲು ಉದ್ದೇಶಿಸಿದ್ದು, ಈಗಾಗಲೇ ಅರ್ಜಿ ಸಹ ಆಹ್ವಾನಿಸಲಾಗಿದ್ದು, ಅರ್ಜಿ ಸಲ್ಲಿಸುವ ಅವಧಿಯನ್ನು ಫೆ.18 ರ ವರೆಗೆ ವಿಸ್ತರಿಸಲಾಗಿದೆ. ಅರ್ಜಿಗಳನ್ನು ವಿಜಯನಗರ ಜಿಲ್ಲೆಯ ಕಮಲಾಪುರದ ಕಮಲ ಮಹಲ್ ಹತ್ತಿರದ ಪ್ರವಾಸೋದ್ಯಮ ಇಲಾಖೆಯ ಕಚೇರಿಯಲ್ಲಿ ಪಡೆದುಕೊಂಡು ಭರ್ತಿ ಮಾಡಿ ಇದೇ ಕಚೇರಿಗೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ದೂ. 08394–295640 ಗೆ ಸಂಪರ್ಕಿಸಬಹುದು ಎಂದು ಪ್ರವಾಸೋದ್ಯಮ ಇಲಾಖೆಯ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

Greetings
You can also say in Hampi Times
Ads Starts from Rs.1000/-
94486 33038

14 ಭಾಷೆಗಳಲ್ಲಿ
ಹಂಪಿ ಟೈಮ್ಸ್ ವೆಬ್‌ನ್ಯೂಸ್‌ಗೆ ಭೇಟಿ ನೀಡಿ, ನಿಮ್ಮ ಮಾತೃಭಾಷೆಯಲ್ಲಿ ಸುದ್ದಿ, ಲೇಖನ ಓದಿರಿ...
www.hampitimes.com